ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 80 RNI Number : KNKAN/25/A2770 30-03-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :80 ರಾಯಚೂರು 30-03-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಇರಾನ್ ಮೇಲೆ ಅತಿ ದೊಡ್ಡ ಭೂ ದಾಳಿಗೆ ಅಮೆರಿಕ ಸಿದ್ಧತೆ: ಇನ್ನೂ ಎರಡು ತಿಂಗಳು ಯುದ್ಧ?

ನವದೆಹಲಿ,ಮಾ.29-

ಇರಾನ್ ಜೊತೆಗಿನ ಸಂಘರ್ಷಕ್ಕೆ ತಾತ್ಕಾಲಿಕ ಕದನ ವಿರಾಮ ನೀಡಿ ರುವ ನಡುವೆಯೇ ಅಮೆರಿಕ, ದೊಡ್ಡ ಭೂದಾಳಿಗೆ ಮುಂದಾಗಿದೆ ಎಂದು ವರದಿಯಾಗಿದೆ. ಸಾವಿರಾರು ಅಮೆರಿಕನ್ ಸೈನಿಕರು ಮತ್ತು ನೌಕಾಪಡೆಗಳು ಮಧ್ಯಪ್ರಾಚ್ಯಕ್ಕೆ ಆಗಮಿಸುತ್ತಿದ್ದು, ಇನ್ನೊಂದು ಸುತ್ತಿನ ಅಪಾಯಕಾರಿ ಯುದ್ಧ ಆರಂಭ ವಾಗುವ ಸಾಧ್ಯತೆ ಇದೆ ಎಂದು ಅಮೆರಿಕದ ಮಾಧ್ಯಮಗಳು ಹೇಳಿವೆ.

ವಿಶೇಷ ಕಾರ್ಯಾಚರಣೆ ಪಡೆಗಳು ಮತ್ತು ಸಾಂಪ್ರದಾಯಿಕ ಭೂ ಸೇನೆಯ ಜೊತೆಗೂಡಿ ಈ ದಾಳಿ ನಡೆಯಬಹುದು ಎಂದು ಅನಾಮ ಧೇಯ ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಿ ಅಮೆರಿಕದ ವಾಷಿಂಗ್ಟನ್ ಪೋಸ್ಟ್ ಮಾಧ್ಯಮವು ಇಂದು (ಭಾನುವಾರ) ವರದಿ ಮಾಡಿದೆ.

ಈ ಭೂ ಕಾರ್ಯಾಚರಣೆ ಇರಾನ್‌ನ ಡ್ರೋನ್, ಕ್ಷಿಪಣಿ ವ್ಯವಸ್ಥೆ, ಸುಧಾರಿತ ಸ್ಫೋಟಕಗಳು, ಇತರ ಶಸ್ತ್ರಾಗಾರಗಳನ್ನು ನಾಶಪ ಡಿಸುವ ಗುರಿ ಹೊಂದಿದೆ ಎಂದು ವರದಿ ಹೇಳಿದೆ. ಕೆಲ ದಿನಗಳ ಹಿಂದೆ ಟ್ರಂಪ್ ಸರ್ಕಾರ, ಯುದ್ಧವನ್ನು ಕೊನೆಗೊಳಿಸುವ ಸುಳಿವು ನೀಡಿತ್ತು. ಆದರೆ, ಈ ಬೆಳವಣಿಗೆಗಳು ಸಂಘ ರ್ಷ ಇನ್ನಷ್ಟು ಭೀಕರತೆ ಪಡೆಯುವ ಎಲ್ಲ ಲಕ್ಷಣಗಳನ್ನು ತೋರಿಸುತ್ತಿದೆ.

ಖಾರ್ಗ್ ದ್ವೀಪ ವಶ ಗುರಿ?: ವರದಿಯ ಪ್ರಕಾರ, ಪರ್ಷಿಯನ್ ಕೊಲ್ಲಿಯಲ್ಲಿ ಇರಾನ್‌ನ ಅತ್ಯಂತ ಕಾರ್ಯತಂತ್ರದ ಸ್ಥಳ, ತೈಲ ರಫ್ತು ಕೇಂದ್ರವಾದ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವುದು ಈ ಭೂ ದಾಳಿಯ ಮುಖ್ಯ ಉದ್ದೇಶ ಎಂದು ಹೇಳಲಾಗಿದೆ.


ಈ ದ್ವೀಪವು ಇರಾನ್‌ನ ಪ್ರಮುಖ ಆರ್ಥಿಕ ನೆಲೆಯಾಗಿದೆ. ಇದರ ನಾಶ ಅಥವಾ ವಶವು ಆ ದೇಶದ ಬೆನ್ನೆಲುಬನ್ನೇ ಮುರಿದಂತಾ ಗುತ್ತದೆ. ವಿಶ್ವಕ್ಕೆ ತೈಲ ಮತ್ತು ಸರಕು ಸಾಗಣೆಯ ಪ್ರಮುಖ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಇರಾನ್ ನಿಯಂತ್ರಿಸುತ್ತಿದೆ. ಇದನ್ನು ತಪ್ಪಿಸುವುದರ ಜೊತೆಗೆ ಖಾರ್ಗ್ ದ್ವೀಪ ವಶಪಡಿಸಿಕೊಂಡಲ್ಲಿ ಅದರ ಸಂಪೂರ್ಣ ಬಲ ಕುಗ್ಗಲಿದೆ.

ಇನ್ನೂ ಎರಡು ತಿಂಗಳು ಯುದ್ಧ?: ವಾಷಿಂಗ್ಟನ್ ಪೋಸ್ಟ್ ವರದಿಯಲ್ಲಿ ಅಮೆರಿಕದ ಅಧಿಕಾರಿಗಳ ಹೇಳಿಕೆಯನ್ನು ಉಲ್ಲೇಖಿಸಲಾಗಿದೆ. ಈ ಯುದ್ಧವು ಬಹುಶಃ ವಾರಗಳಲ್ಲ, ಇನ್ನೂ ಎರಡು ತಿಂಗಳು ನಡೆಯುವ ಸಾಧ್ಯತೆಯನ್ನು ಅವರು ಇಲ್ಲಿ ತಿಳಿಸಿದ್ದಾರೆ.

ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು, ಭೂ ದಾಳಿ ನಡೆಸದೆ ನಮ್ಮ ಉದ್ದೇಶಗಳನ್ನು ಸಾಧಿಸಬಹುದು ಎಂದಿದ್ದರು. ಆದರೆ, ತೆರೆಮರೆಯಲ್ಲಿ ಸೇನಾ ದಾಳಿಯನ್ನು ಮೊದಲೇ ಯೋಜಿಸಲಾಗಿತ್ತು ಎಂದು ಇನ್ನೊಬ್ಬ ಅಧಿಕಾರಿ ಹೇಳಿದ್ದಾರೆ.

ಸನ್ನದ್ಧ ಸ್ಥಿತಿಯಲ್ಲಿ ಪಡೆಗಳು: 3,500 ಸೈನಿಕರು ಮತ್ತು ನಾವಿಕರ ಕಾರ್ಯಪಡೆ ಮಧ್ಯಪ್ರಾಚ್ಯಕ್ಕೆ ಆಗಮಿಸಿದೆ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಘೋಷಿಸಿದೆ. ಮಾರ್ಚ್ 27 ರಂದು ಯುಎಸ್ ಎಸ್ ಟ್ರಿಪೋಲಿ (7) ಯುದ್ಧ ನೌಕೆಯಲ್ಲಿ ಸೈನಿಕರು ಆಗಮಿಸಿದ್ದಾರೆ ಎಂದು ಅದು ತಿಳಿಸಿದೆ.

ಯುಎಸ್‌ಎಸ್ ಟ್ರಿಪೋಲಿ, ಉಭಯಚರ ದಾಳಿ (ಭೂಮಿ ಮತ್ತು ನೀರು) ಹಡಗಾಗಿದೆ. ಅದರಲ್ಲಿರುವ 31 ನೇ ಸಾಗರ ದಂಡಯಾತ್ರೆಯ ಪಡೆಯು ಜಪಾನ್‌ನಲ್ಲಿ ನೆಲೆಗೊಂ ಡಿದೆ. ಎರಡು ವಾರಗಳ ಹಿಂದೆ ತೈವಾ ನ್ ಸುತ್ತಮುತ್ತಲಿನ ಪ್ರದೇಶದಲ್ಲಿ ಸಮರಭ್ಯಾಸ ನಡೆಸುತ್ತಿತ್ತು ಎಂದು ಹೇಳಲಾಗಿದೆ.



ಬೀದಿಬದಿ ವ್ಯಾಪಾರಿಗಳಿಗೆ ವೈಂಡಿಂಗ್ ಜೋನ್ ನಿರ್ಮಾಣಕ್ಕೆ ಆಗ್ರಹ : ಪಾಲಿಕೆ ವಿರುದ್ಧ ಹೋರಾಟದ ಎಚ್ಚರಿಕೆ

ರಾಯಚೂರು, ಮಾ.29-

ಬೀದಿಬದಿ ವ್ಯಾಪಾರಿಗಳಿಗೆ ಶಾಶ್ವತ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ನಗರದಲ್ಲಿ ತಕ್ಷಣ ವೈಂಡಿಂಗ್ ಜೋನ್‌ಗಳನ್ನು ನಿರ್ಮಿಸಬೇಕು ಎಂದು ಆಗ್ರಹಿಸಿ, ಇಲ್ಲವಾದರೆ ಹೋ ರಾಟ ನಡೆಸುವುದಾಗಿ ಬೀದಿ ಬದಿ ವ್ಯಾಪಾರಿಗಳ ಸಂಘ ಎಚ್ಚರಿಕೆ ನೀಡಿದೆ.



ನಗರದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಬೀದಿ ಬದಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಅತಿಕ್ ಪಟೇಲ್, ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 5,000ಕ್ಕೂ ಹೆಚ್ಚು ವ್ಯಾಪಾರಿಗಳು ಕಳೆದ ನಾಲ್ಕು ದಶಕಗಳಿಂದ ಜೀವನೋಪಾಯಕ್ಕಾಗಿ ಬೀದಿಬದಿ ವ್ಯಾಪಾರ ನಡೆಸುತ್ತಿದ್ದು, ಇವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವಲ್ಲಿ ಪಾಲಿಕೆ ವಿಫಲವಾಗಿದೆ ಎಂದು ಆರೋಪಿಸಿದರು.

ಇತ್ತೀಚೆಗೆ ಪಾಲಿಕೆ ಸಿಬ್ಬಂದಿಗಳು ವ್ಯಾಪಾರಿಗಳನ್ನು ತೆರವುಗೊಳಿಸುವ ನೆಪದಲ್ಲಿ ಕಿರುಕುಳ ನೀಡುತ್ತಿರುವುದಾಗಿ ದೂರಿದ ಅವರು, ಈ ಕುರಿತು ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವ್ಯಾಪಾರಿಗಳ ಹಿತಾಸಕ್ತಿಗಾಗಿ ವೈಂಡಿಂಗ್ ಜೋನ್ ಗಳ ನಿರ್ಮಾಣ ಹಾಗೂ ಟಿವಿಸಿ ರಚನೆ ತುರ್ತಾಗಿ ನಡೆಯಬೇಕು ಎಂದು ಒತ್ತಾಯಿಸಿದರು.

ಮಹಾನಗರ ಪಾಲಿಕೆಯ 2026-27ರ ಬಜೆಟ್‌ನಲ್ಲಿ ಬೀದಿ ಬದಿ ವ್ಯಾಪಾರಿಗಳ ಅಭಿವೃದ್ಧಿಗಾಗಿ ₹20 ಕೋಟಿ ಮೀಸಲು ಇಡಲಾಗಿದ್ದು, ಆ ಹಣವನ್ನು ಸಮರ್ಪಕವಾಗಿ ಬಳಸಿಕೊಂಡು ಕೇಂದ್ರ ಬಸ್ ನಿಲ್ದಾಣ, ಹಳೆ ಕಮಿಷನರ್ ಬಂಗಲೆ ಮುಂಭಾಗ, ಸಾರ್ವಜನಿಕ ಉದ್ಯಾನವನ ಹಿಂಭಾಗ, ಬಸವ ವೃತ್ತ ಹಾಗೂ ರಾಜ ಕಾಲುವೆ ಪ್ರದೇಶಗಳಲ್ಲಿ ವೈಂಡಿಂಗ್ ಜೋನ್‌ಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಲಿಂಗಸುಗೂರು ರಸ್ತೆಯ ಕೆಇಬಿ ಕಾಲೋನಿ ಬಳಿ ಆರಂಭಿಸಿದ್ದ ವೈಂಡಿಂಗ್ ಜೋನ್ ಕಾಮಗಾರಿಗೆ ಕೆಲವರು ಅಡ್ಡಿಪಡಿಸಿರುವುದನ್ನು ಖಂಡಿಸಿದ ಅವರು, ವ್ಯಾಪಾರಿಗಳ ಬದುಕಿಗೆ ಧಕ್ಕೆ ಉಂಟುಮಾಡುವವರ ವಿರುದ್ಧ ತೀವ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಮೂರನೇಯ ಪುಟಕ್ಕೆ



ಗ್ಯಾಸ್ ಏಜೆನ್ಸಿ - ಪೆಟ್ರೋಲ್ ಬಂಕ್ ಮಾಲಿಕರ ಸಭೆ

ಇಂಧನ ಅಭಾವವಿಲ್ಲ ಅನಗತ್ಯ ಗಾಬರಿ ವದಂತಿಗಳಿಗೆ ಕಿವಿಗೊಡಬೇಡಿ - ಅಶೋಕಪವಾರ

ಸಿರವಾರ, ಮಾ.29-

ತಾಲೂಕಿನ ವ್ಯಾಪ್ತಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯ ವದಂತಿಗೆ ಜನರು ಆತಂಕಗೊಂಡು ಪೆಟ್ರೋಲ್ ಪಂಪ್‌ಗಳತ್ತ ಮುಗಿ ಬೀಳುತ್ತಿರುವ ದೃಶ್ಯಗಳು ಕಂಡು ಬರುತ್ತಿವೆ. ಪಟ್ಟಣದ ಪೆಟ್ರೋಲ್ ಪಂಪ್ ಸೇರಿದಂತೆ ಬಹುತೇಕ ಪಂಪ್‌ಗಳಲ್ಲಿ ವಾಹನ ಸವಾರರು ದೀರ್ಘ ಸಾಲಿನಲ್ಲಿ ನಿಂತು ಇಂಧನಕ್ಕಾಗಿ ಕಾಯುತ್ತಿರುವುದು ಕಂಡುಬರುತ್ತಿದೆ.ಕಳೆದ ಕೆಲವು ದಿನಗಳಿಂದ ಹಬ್ಬಿರುವ ಪೆಟ್ರೋಲ್ ಕೊರತೆಯ ವದಂತಿಗಳಿಗೆ ತಹಸೀಲ್ದಾರ ಅಶೋಕಪವಾರ ಪೆಟ್ರೋಲ್ ಬಂಕ್ ಮಾಲೀಕರ ಸಭೆ ನಡೆಸಿ ತೆರೆ ಎಳೆದಿದ್ದಾರೆ. ಈ ಕುರಿತು ಮಾತನಾಡಿದ ಅವರು ಸಾಲು ಸಾಲು ರಜೆ, ನಗದು ಪಾವತಿ ಮಾಡಿ ಡಿಸೇಲ್, ಪೆಟ್ರೋಲ್ ಖರಿದಿ

ಮೂರನೇಯ ಪುಟಕ್ಕೆ

ಸ್ವಯಂ ಗಣತಿ ಯಶಸ್ಸಿಗೆ ಜಿಲಾಧಿಕಾರಿ ನಿತೀಶ್ ಕೆ ಸಾರ್ವಜನಿಕರಲ್ಲಿ ಮನವಿ

ರಾಯಚೂರು ಮಾರ್ಚ್ 29

ಕೇಂದ್ರ ಗೃಹ ಮಂತ್ರಾಲಯದಿಂದ 2027ರ ಜನಗಣತಿಯು ದೇಶದಲ್ಲಿ ಇದೇ ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಯಲಿದೆ. ಅದರಂತೆ ಕರ್ನಾಟಕದಲ್ಲಿ 2027ರ ಜನಗಣತಿಯ (-) ಮೊದಲ ಹಂತವಾದ ಮನೆಗಳ ಪಟ್ಟಿ ಮತ್ತು ಮನೆ ಗಣತಿಯ ಸ್ವಯಂ ಗಣತಿಯನ್ನು ಏಪ್ರಿಲ್ 1ರಿಂದ 15ರವರೆಗೆ ನಡೆಸಲಾಗುತ್ತಿದ್ದು, ರಾಯಚೂರು ಜಿಲ್ಲೆಯ ಎಲ್ಲಾ ನಾಗರಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಮನೆಯ ಸ್ವಯಂ ಗಣತಿ ಮಾಡಿ ಜನಗಣತಿಯನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲೆಯ ಪ್ರಧಾನ ಜನಗಣತಿ ಅಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಕೋರಿದ್ದಾರೆ.

ಸ್ವಯಂ-ಗಣತಿ (ಎಸ್‌ಇ)ಗೆ ಅವಕಾಶವಿದ್ದು, ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15-20 ನಿಮಿಷಗಳ ಅವಧಿಯಲ್ಲಿ ಸ್ವಯಂ-ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್/ ಇ-ಮೇಲ್‌ನಲ್ಲಿ ಸ್ವಯಂ-ಗಣತಿ ಐಡಿ (ಎಸ್‌ಇ ಐಡಿ) ಪಡೆಯಬಹುದಾಗಿದೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಎಸ್‌ಇ ಐಡಿಯನ್ನು ಅವರೊಂದಿಗೆ ಹಂಚಿಕೊಳ್ಳುವ ಮೂಲಕಜಿಲ್ಲೆಯ ಎಲ್ಲಾ ನಾಗರಿಕರು ಈ ಅವಕಾಶವನ್ನು ಸದುಪಯೊಗಿಸಿಕೊಂಡು ತಮ್ಮ ಮನೆಯ ಸ್ವಯಂ ಗಣತಿ ಮಾಡಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರಿಗೆ ಸಮರ್ಪಕವಾಗಿ ನೀರು ಬಾರದೆ ಇದ್ದರೆ ಹೋರಾಟ ಅನಿವಾರ್ಯ: ಪ್ರಭಾಕರ ಪಾಟೀಲ್

ದೇವದುರ್ಗ: ನಾರಾಯಣಪುರ ಬಲದಂಡೆ ನಾಲೆಗಳಿಗೆ ಏ.1ರಿಂದ 10ವರೆಗೆ ನೀರು ಹರಿಸುವಂತೆ ರೈತರ ಬೇಡಿಕೆಯಾಗಿದ್ದು, ನೀರಾವರಿ ಸಲಹ ಸಮಿತಿ ಸಭೆಯಲ್ಲಿ ಏ.1ರಿಂದ 7ರವರೆಗೆ ನೀರು ಹರಿಸುವುದಾಗಿ ತೀರ್ಮಾನಿಸಲಾಗಿದೆ. ಒಂದೊಮ್ಮೆ ಕೊನೆ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಬಾರದೆ ಇದ್ದರೇ ಹೋರಾಟ ಅನಿವಾರ್ಯ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಭಾಕರ ಪಾಟೀಲ್, ಏ.1ರಿಂದ 10ರವರೆಗೆ ಯಾವುದೇ ವಾರಬಂದಿ ಪದ್ದತಿ ಮಾಡದೇ ನೀರು ಹರಿಸಬೇಕೆಂಬುದು ರೈತರ ಬೇಡಿಕೆಯಾಗಿದೆ. ನೀರಾವರಿ ಸಲಹ ಸಮಿತಿ ಕೈಗೊಂಡಿರುವ ತೀರ್ಮಾನ ಒಳ್ಳೆಯದಾಗಿದ್ದು, ಕೊನೆ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಬರದೇ ಇರುವುದರಿಂದ ಏ.10ರವರೆಗೆ ನೀರು ಹರಿಸಬೇಕು ಎಂಬ ಬೇಡಿಕೆಗೆ ಅಧಿಕಾರಿಗಳು ಸ್ಪಂದಿಸಿದ್ದಾರೆ ಎಂದು ಹೇಳಿದರು.

ಗೇಟ್ ಗಳಲ್ಲಿ ಆಗುತ್ತಿರುವ ಗೊಂದಲಗಳಿಂದ ಕೊನೆ ಭಾಗದ ರೈತರಿಗೆ ನೀರು ತಲುಪುತ್ತಿಲ್ಲ. ನಾರಾಯಣಪುರ ಬಲದಂಡೆ ಕಾಲುವೆಗಳ ಸಮಸ್ಯೆ ಕುರಿತು ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಸ್ಥಳಕ್ಕೆ ಬಾರದೇ ಅಲ್ಲಲ್ಲಿ ಕುಳಿತು ಕಾಲಹರಣ ಮಾಡುವುದರಿಂದ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ ಎಂದು ಹೇಳಿದರು.



ಭತ್ತ, ಸಜ್ಜೆ, ಶೇಂಗಾ ಸೇರಿದಂತೆ ಇತರೆ ಬೆಳೆಗಳು ನೀರಿಲ್ಲದೆ ಬಾಡುತ್ತಿವೆ. ಪ್ರತಿವರ್ಷ ನೀರಿಗಾಗಿ ಹೋರಾಟ ಕೈಗೊಂಡರು ಅಧಿಕಾರಿಗಳು ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದಾರೆ ಎಂದು ದೂರಿದರು.

ಸಾಲ ಶೂಲ ಮಾಡಿಕೊಂಡು ಬಿತ್ತನೆ ಮಾಡಿದ ರೈತರ ಬೆಳೆಗಳಿಗೆ ನೀರಿನ

ಮೂರನೇಯ ಪುಟಕ್ಕೆ



ರಾಯಚೂರು ಹಟ್ಟಿ ಚಿನ್ನದ ಗಣಿ ಬಳಿ ರೈಲ್ವೆ ನಿಲ್ದಾಣ ನಿರ್ಮಿಸುವಂತೆ ಮನವಿ

ಹಟ್ಟಿ,ಮಾ.29-

ಗದಗ-ವಾಡಿ ರೈಲ್ವೆ ಮಾರ್ಗದ ಹಟ್ಟಿ ಚಿನ್ನದ ಗಣಿ ಬಳಿ ರೈಲ್ವೆ ನಿಲ್ದಾಣ ನಿರ್ಮಾಣ ಮಾಡಿ, ರೈಲುಗಳನ್ನು ಹಟ್ಟಿ ಮೂಲಕ ಹಾದು ಹೋಗುವಂತೆ ಮಾಡಬೇಕೆಂದು ದಕ್ಷಿಣ ಪಶ್ಚಿಮ ರೈಲ್ವೆ ಕೇಂದ್ರ ಕಚೇರಿಯ ಜನರಲ್ ಮ್ಯಾನೇಜರ್ ಅವರಿಗೆ ಹಟ್ಟಿ ಪಟ್ಟಣ ನಾಗರಿಕ ಸಮಿತಿ ವತಿಯಿಂದ ಮನವಿ ಸಲ್ಲಿಸಲಾಯಿತು.

ಹಟ್ಟಿ ಚಿನ್ನದ ಗಣಿ ದೊಡ್ಡ ನಗರ ಪ್ರದೇಶವಾಗಿದ್ದು, ಸುಮಾರು 50

ಮೂರನೇಯ ಪುಟಕ್ಕೆ

ಕರ್ನಾಟಕ ರಾಜ್ಯದಲ್ಲಿ ಎಲ್ಲಾ ವಲಯಗಳಿಗೂ ಅಡೆತಡೆಯಿಲ್ಲದೆ ಎಲ್‌ಪಿಜಿ ಸರಬರಾಜು

ರಾಜ್ಯದಲ್ಲಿ ಆಟೋ ಎಲ್‌ಪಿಜಿ ಕೊರತೆ ಇಲ್ಲ: ಆಹಾರ ಇಲಾಖೆಯಿಂದ ಸ್ಪಷ್ಟನೆ

ರಾಯಚೂರು,ಮಾ.29

ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆ ಇಲ್ಲದೆ ಎಲ್.ಪಿ.ಜಿ ಸರಬರಾಜು ಮಾಡಲಾ ಗುತ್ತಿದೆ ಅಲ್ಲದೇ ವಿಶೇಷವಾಗಿ ಆಟೋ ಎಲ್.ಪಿ.ಜಿಗೆ ಯಾವುದೇ ರೀತಿಯ ಕೊರತೆ ಇಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ರಾಜ್ಯದಲ್ಲಿ ಎಲ್‌ಪಿಜಿ ಸರಬರಾಜು ವ್ಯವಸ್ಥೆಯನ್ನು, ವಿಶೇಷವಾಗಿ ಆಟೋ ಎಲ್‌ಪಿಜಿ ಪೂರೈಕೆಯನ್ನು ರಾಜ್ಯ ಸರ್ಕಾರವು ನಿಕಟವಾಗಿ ಗಮನಿಸುತ್ತಿದೆ. ಕರ್ನಾಟಕದಾದ್ಯಂತ ಒಟ್ಟು 72 ಆಟೋ ಎಲ್‌ಪಿಜಿ ಡಿಸ್ಪೆನ್ಸಿ ಂಗ್ ಸ್ಟೇಷನ್‌ಗಳು () ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕೇವಲ ಬೆಂಗಳೂರು ನಗರವೊಂದರಲ್ಲೇ 31 ಕೇಂದ್ರಗಳು ಲಭ್ಯವಿವೆ.

ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ () , ಮತ್ತು ಮೂಲಕ ಆಟೋ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ ರೂ. 77.74 ರ ದರದಲ್ಲಿ ಆಟೋ ಎಲ್‌ಪಿಜಿ ಪೂರೈಸುತ್ತಿವೆ.

ಕಳೆದ ವಾರದಲ್ಲಿ ದಿನಕ್ಕೆ ಸರಾಸರಿ 64.9 ಮೆಟ್ರಿಕ್ ಟನ್ ಆಟೋ ಎಲ್‌ಪಿಜಿಯನ್ನು ವಿತರಿಸಲಾಗಿದೆ. ಸಂಘರ್ಷದ ಮೊದಲು ಈ ಪ್ರಮಾಣವು ದಿನಕ್ಕೆ 57.6 ಮೆಟ್ರಿಕ್ ಟನ್ ಇತ್ತು. ಇದು ಪೂರೈಕೆಯಲ್ಲಿನ ಗಮನಾರ್ಹ ಹೆಚ್ಚಳವನ್ನು ತೋರಿಸುತ್ತದೆ.

ರಾಜ್ಯದಾದ್ಯಂತ ಪ್ರತಿದಿನ ಸುಮಾರು 4 ಲಕ್ಷ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಹಾಗೂ ಸುಮಾರು 18,000 ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲಾಗುತ್ತಿದೆ.

ಎಲ್ಲಾ ವಲಯಗಳಿಗೂ ಯಾವುದೇ ಅಡೆತಡೆಯಿಲ್ಲದೆ ಎಲ್‌ಪಿಜಿ ಸರಬರಾಜು ಆಗುವುದನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ನಿರಂತರವಾಗಿ ಪರಿಸ್ಥಿತಿಯ ಮೇಲೆ ನಿಗಾ ಇರಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಮಸಮಾಜ ನಿರ್ಮಾಣಕ್ಕಾಗಿ ಅಗ್ನಿ ಬನ್ನಿ ರಾಯಸ್ವಾಮಿ ಅವತರಿಸಿದರು: ದಂಡಪ್ಪ ಬಿರಾದಾರ

ರಾಯಚೂರು ಮಾರ್ಚ 29 (ಕ.ವಾ.): ಸಮಾಜದಲ್ಲಿನ ಸ್ತ್ರೀ ರಕ್ಷಣೆ, ಗೋ ರಕ್ಷಣೆ ಮತ್ತು ಭಕ್ತ ರಕ್ಷಣೆಗಾಗಿ ರಾಕ್ಷಸರನ್ನು ಸಂವಹರಿಸಲು ಅಗ್ನಿಕುಂಡದಿಂದ ಮಹಾಪುರುಷ ಅಗ್ನಿ ಬನ್ನಿರಾಯಸ್ವಾಮಿ ಅವತರಿಸಿದರು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿ ದಂಡಪ್ಪ ಬಿರಾದಾರ ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಇವರ ಸಂಯುಕ್ತ ಆಶ್ರಯದಲ್ಲಿ ಮಾರ್ಚ 29ರಂದು ನಡೆದ ಅಗ್ನಿ ಬನ್ನಿರಾಯಸ್ವಾಮಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಗ್ನಿ ಬನ್ನಿ ರಾಯಸ್ವಾಮಿಯವರು ಹಲವಾರು ಸಾಮಾಜಿಕ ಸೇವಾ ಕಾರ್ಯಗಳನ್ನು ಮಾಡಿದರು. ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು.

ಸಮಾಜದಲ್ಲಿ ಅಶಾಂತಿ, ಅನ್ಯಾಯ ಅಧರ್ಮ ಹೆಚ್ಚಾದಾಗ ಅವತಾರ ಪುರುಷರು ಹುಟ್ಟುತ್ತಾರೆ. ಅದರಂತೆ ಅಗ್ನಿ ಬನ್ನಿ ರಾಯಸ್ವಾಮಿಯವರು ಧರ್ಮ ಉದ್ಧಾರ ಮಾಡಲು ತಲೆ ಮೇಲೆ ಕಿರೀಟ ಹೊತ್ತು, ಬಿಳಿ ಕುದುರೆ ಏರಿ, ಖಡ್ಗ ಹಿಡಿದು ವಾತಾಪಿ ರಾಕ್ಷಸರ ಸಂಹಾರ ಮಾಡಿ ಸಮಾಜದಲ್ಲಿ ಶಾಂತಿ ಸ್ಥಾಪನೆ ಮಾಡಿದರು. ಇವರು ಇಂದ್ರನ ಮಗಳಾದ ಮಂತ್ರಿ ಮಾಲೆಯನ್ನು ಮದುವೆಯಾದ ನಂತರ ಹಲವು ಮಕ್ಕಳಿಗೆ ಜನ್ಮ ಕೊಡುತ್ತಾರೆ. ಬೆಂಗಳೂರು, ಮೈಸೂರು, ಹಾಸನದಲ್ಲಿ ತಿಗಳ ಸಮಾಜದವರು ಹೆಚ್ಚಾಗಿದ್ದು, ಪ್ರತಿ ವರ್ಷವೂ ಈ ಸಮಾಜದವರು

ಮೂರನೇಯ ಪುಟಕ್ಕೆ



ಕುಕನೂರಿನಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ 1.60 ಕೋಟಿ ರೂ. ಮಂಜೂರು: ಸ್ಥಳ ಪರಿಶೀಲನೆ ನಡೆಸಿದ ಶಾಸಕ ಬಸವರಾಜ ರಾಯರೆಡ್ಡಿ

ಕುಕನೂರು,ಮಾ.29:

2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಮಹನೀಯರ ಮೂರ್ತಿ ಸ್ಥಾಪನೆ ಕಾಮಗಾರಿಗಳಿಗೆ ಒಟ್ಟು 1.60 ಕೋಟಿ ರೂ. ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿಗಳ ಅನುಷ್ಠಾನಕ್ಕೆ ಹಸಿರು ನಿಶಾನೆ ದೊರೆತಿದೆ.

ಯಲಬುರ್ಗಾ ಕ್ಷೇತ್ರದ ಶಾಸಕರ ಶಿಫಾರಸ್ಸಿನ ಮೇರೆಗೆ, ಕೆ.ಆರ್.ಐ.ಡಿ.ಎಲ್ ಕೊಪ್ಪಳದ ಕಾರ್ಯಪಾಲಕ ಅಭಿಯಂತರರು ಸಲ್ಲಿಸಿದ ಪ್ರಸ್ತಾವನೆಗಳಿಗೆ ಸರಕಾರ ಅನುಮೋದನೆ ನೀಡಿದೆ.

ಇದರೊಂದಿಗೆ, ಪಟ್ಟಣದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಜಗಜ್ಯೋತಿ ಬಸವೇಶ್ವರ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೂರ್ತಿ ಪ್ರತಿಷ್ಠಾಪನೆಗಾಗಿ ಶನಿವಾರ ವಿವಿಧ ಪ್ರಮುಖ ಸ್ಥಳಗಳನ್ನು ವೀಕ್ಷಿಸಿ ಪರಿಶೀಲನೆ ನಡೆಸಲಾಯಿತು.

ಶಾಸಕ ಬಸವರಾಜ ರಾಯರೆಡ್ಡಿ ಅವರ ನೇತೃತ್ವದಲ್ಲಿ ನಡೆದ ಪರಿಶೀಲನೆ ವೇಳೆ ಪಟ್ಟಣದ ವಿವಿಧ ವೃತ್ತಗಳು ಮತ್ತು ಪ್ರಮುಖ ಸ್ಥಳಗಳನ್ನು ಗುರುತಿಸಿ ಸೂಕ್ತ ಜಾಗಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಇದೇ ವೇಳೆ, ಪಟ್ಟಣದ ರೈಲ್ವೆ ನಿಲ್ದಾಣ ಹಾಗೂ ಬಸ್ ನಿಲ್ದಾಣಗಳಲ್ಲಿ ನಡೆಯುತ್ತಿರುವ ಸಮಸ್ಯೆಗಳ ಕುರಿತು ಸ್ಥಳೀಯರೊಂದಿಗೆ ಚರ್ಚಿಸಿ, ವ್ಯವಸ್ಥೆಯನ್ನು ವೀಕ್ಷಣೆ ಮಾಡಿ ಸಾರ್ವಜನಿಕರಿಗೆ ಉತ್ತಮ ಸೌಲಭ್ಯ ಒದಗಿಸುವ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಶಾಸಕರು ತಿಳಿಸಿದರು.

ಮೂರ್ತಿಗಳ ಸ್ಥಾಪನೆಗೆ ಅಗತ್ಯವಾದ ಮೂಲಸೌಕರ್ಯ, ಸಂಚಾರ ವ್ಯವಸ್ಥೆ ಹಾಗೂ ಸಾರ್ವಜನಿಕರಿಗೆ ಅನುಕೂಲತೆಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳ ಆಯ್ಕೆ ಮಾಡಬೇಕೆಂದು ಶಾಸಕರು ಸೂಚಿಸಿದರು. ಕಾಮಗಾರಿಯನ್ನು ಶೀಘ್ರವಾಗಿ ಆರಂಭಿಸಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕುಕನೂರು ಪಟ್ಟಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್, ಜಗಜ್ಯೋತಿ ಬಸವೇಶ್ವರ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಮೂರ್ತಿ ಸ್ಥಾಪನೆಗೆ ತಲಾ 40 ಲಕ್ಷ ಹಾಗೂ ಯಲಬುರ್ಗಾ ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರರ ಮೂರ್ತಿ ಸ್ಥಾಪನೆಗೆ 40 ಲಕ್ಷ ಮಂಜೂರಾಗಿದ್ದು, ಒಟ್ಟು 1.60 ಕೋಟಿ ಅನುದಾನವನ್ನು ಸರಕಾರ ಒದಗಿಸಿದೆ.

ಈ ವೇಳೆ ಮಾತನಾಡಿದ ಶಾಸಕ ಬಸವರಾಜ ರಾಯರೆಡ್ಡಿ, ಕುಕನೂರು ಹಾಗೂ ಯಲಬುರ್ಗಾ ಪಟ್ಟಣಗಳಲ್ಲಿ ಮಹನೀಯರ ಮೂರ್ತಿಗಳನ್ನು ಸ್ಥಾಪಿಸುವುದು ಜನರ ಬಹುಕಾಲದ ಬೇಡಿಕೆಯಾಗಿತ್ತು. ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಮೂರ್ತಿ ಸ್ಥಾಪನೆಗೆ ಗ್ರೀನ್ ಸಿಗ್ನಲ್ ದೊರೆತಿದೆ. ರಾಜ್ಯ ಸರಕಾರದಿಂದ 1.60 ಕೋಟಿ ಅನುದಾನ ಮಂಜೂರಾಗಿರುವುದು ಸಂತೋಷದ ವಿಷಯ. ಪಟ್ಟಣದಲ್ಲಿ ಸ್ಥಳ ಪರಿಶೀಲನೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದ್ದೇನೆ. ಕಾಮಗಾರಿಗಳನ್ನು ಪಾರದರ್ಶಕವಾಗಿ ಹಾಗೂ ಗುಣಮಟ್ಟದೊಂದಿಗೆ ಶೀಘ್ರ ಪೂರ್ಣಗೊಳಿಸುವುದರ ಜೊತೆಗೆ ಪಟ್ಟಣದ ಮೂಲಸೌಕರ್ಯ ಅಭಿವೃದ್ಧಿಗೂ ಆದ್ಯತೆ ನೀಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಸಂಗಮೇಶ್ ಗುತ್ತಿ, ಕಾಂಗ್ರೆಸ್ ಮುಖಂಡರಾದ ಸತ್ಯನಾರಾಯಣಪ್ಪ ಹರಪ್ಪನಹಳ್ಳಿ, ಯಂಕಣ್ಣ ಯರಾಶಿ, ಹಣಮಂತಪ್ಪ ಚಂಡೂರ್, ಸಿದ್ದಯ್ಯ ಕಳ್ಳಿಮಠ, ರಹಿಮಾನಸಾಬ ಮುಕಪ್ಪನವರ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು. ತಾಲೂಕು ಪಂಚಾಯತಿ ಇಒ ಸಂತೋಷ್ ಪಾಟೀಲ್ ಬಿರಾದರ್, ತಹಶೀಲ್ದಾರ್ ಬಸವರಾಜ್ ಬೆಣ್ಣೆಶಿರೂರ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ನಾಗೇಶ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳಾದ ಅನಿಲ್ ಪಾಟೀಲ್ ಮಳಿಮಠ, ಅನಿಲ್ ಜೋಶಿ ಮತ್ತು ಪಟ್ಟಣ ಪಂಚಾಯತ್ ಸದಸ್ಯರು ಭಾಗವಹಿಸಿದ್ದರು.

ಕಲಬುರಗಿ ಎಲ್‌ಪಿಜಿ ದರ ಏರಿಕೆ ವಿರೋಧಿಸಿ ಆಟೋ ಚಾಲಕರಿಂದ ಪ್ರತಿಭಟನೆ

ಕಲಬುರಗಿ,ಮಾ.29

ನಗರದಲ್ಲಿ ಆಟೋಗಳಿಗೆ ಬಳಸುವ ಎಲ್‌ಪಿಜಿ ಗ್ಯಾಸ್ ದರವನ್ನು ದಿಢೀರನೆ ಹೆಚ್ಚಿಸಿರುವುದನ್ನು ಖಂಡಿಸಿ, ನೂರಾರು ಆಟೋ ಚಾಲಕರು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಎಲ್‌ಪಿಜಿ ಗ್ಯಾಸ್ ಬಂಕ್ ಮಾಲೀಕರು ಯಾವುದೇ ಸ್ಪಷ್ಟ ಕಾರಣವಿಲ್ಲದೆ ದಿಢೀರನೆ ದರವನ್ನು ಹೆಚ್ಚಿಸಿದ್ದು, ಇದು ಬಡ ಆಟೋ ಚಾಲಕರ ಮೇಲೆ ಭಾರೀ ಹೊರೆ ಆಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ನಗರದಲ್ಲಿ ಆಟೋಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಚಾಲಕರಿಗೆ ಸಮರ್ಪಕ ಆದಾಯ ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ದಿಢೀರನೆ ಗ್ಯಾಸ್ ದರ ಹೆಚ್ಚಿಸಿರುವುದು ಅವರ ಬದುಕಿಗೆ ದೊಡ್ಡ ಹೊಡೆತವಾಗಿದೆ. ದಿನಪೂರ್ತಿ ಆಟೋ ಚಲಾಯಿಸಿದರೂ ಹೊಟ್ಟೆಪಾಡಿಗೂ ಹಣ ಸಾಕಾಗುತ್ತಿಲ್ಲ. ಅದರಲ್ಲಿ ದರ ಹೆಚ್ಚಳ ಮಾಡುತ್ತಿರುವುದು ಖಂಡನೀಯ ಎಂದರು.

ಪೆಟ್ರೋಲ್, ಡೀಸೆಲ್ ಹಾಗೂ ಗೃಹ ಬಳಕೆಯ ಸಿಲಿಂಡರ್ ದರಗಳಲ್ಲಿ ಏರಿಕೆ ಇಲ್ಲದಿದ್ದರೂ, ಆಟೋ ಎಲ್‌ಪಿಜಿ ದರವನ್ನು ಮಾತ್ರ ಹೆಚ್ಚಿಸಿರುವುದು ಉದ್ದೇಶಪೂರ್ವಕ ಕ್ರಮವಾಗಿದೆ. ಈ ಮೂಲಕ ಗ್ಯಾಸ್ ಏಜೆನ್ಸಿ ಗಳು ಆಟೋ ಚಾಲಕರಿಂದ ಅನ್ಯಾಯವಾಗಿ ಹಣ ವಸೂಲಿ ಮಾಡುತ್ತಿದ್ದಾರೆ. ಕೂಡಲೇ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ಎಲ್‌ಪಿಜಿ ದರ ಹೆಚ್ಚಿಸಬಾರದು ಎಂದು ಆಗ್ರಹಿಸಿದ್ದಾರೆ.



ಇಲ್ಲದಿದ್ದಲ್ಲಿ, ಕಲಬುರಗಿಯ ಎಲ್ಲಾ ಆಟೋ ಚಾಲಕರ ನೇತೃತ್ವದಲ್ಲಿ ನಗರ ಬಂದ್ ನಡೆಸುವ ಎಚ್ಚರಿಕೆಯನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀರಾಮ ಸೇನೆ ಜಿಲ್ಲಾ ಅಧ್ಯಕ್ಷ ಲಕ್ಷ್ಮಿಕಾಂತ್ ಸ್ವಾದಿ, ಶಾಂತಪ್ಪ ಕಟ್ಟಾ, ಅಭಿಷೇಕ್ ಭುವಿ, ಅಲೋಕ್ ಮಾಡೇದ, ಜಗನ್ನಾಥ ಹರಸೂರ್, ಅಭಿಷೇಕ್ ಠಾಕುರ, ಅಂಬರೀಷ್ ಜಮಾದಾರ್, ಭೀಮಾಶಂಕರ ಸೇರಿದಂತೆ ಹಲವರು ಭಾಗವಹಿಸಿದ್ದರು.

ಚರಂಡಿ ವ್ಯವಸ್ಥೆ, ಫುಟ್ ಪಾತ್ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು: ಲಕ್ಷ್ಮಣ ಕಟ್ಟಿಮನಿ

ಕನಕಗಿರಿ,ಮಾ.29

2026-27 ಸಾಲಿನ ಬಜೆಟ್ ನಲ್ಲಿ ಜನರ ನಿರೀಕ್ಷೆಯಂತೆ ಹದಿನೇಳು ವಾರ್ಡಗಳಲ್ಲಿ ಚರಂಡಿ ವ್ಯವಸ್ಥೆ, ಫುಟ್ ಪಾತ್ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ ತಿಳಿಸಿದರು.

ಪಟ್ಟಣ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ನಡೆದ 2026-27ನೇ ಸಾಲಿನ ಆಯುವ್ಯಯ ಬಜೆಟ್ ನ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಲಕ್ಷ್ಮಣ ಕಟ್ಟಿಮನಿ, ಹಲವು ವರ್ಷಗಳಿಂದ ಪಟ್ಟಣದಲ್ಲಿ ನಿವೇಶನ ಹೊಂದಿದ ಮಾಲೀಕರು ತೆರಿಗೆ ಹಣವನ್ನು ಪಾವತಿಸಿಲ್ಲ. ಈ ಕುರಿತು ಮಾಲೀಕರಿಗೆ ನಿವೇಶನ ಪೂರ್ಣ ಪ್ರಮಾಣದ ತೆರಿಗೆ ಪಾವತಿಸುವಂತೆ ಸೂಚಿಸಲಾಗುವುದು. ಅನೇಕ ನಿವೇಶನಗಳ ಮಾಲೀಕರು ಮಾತ್ರ ತೆರಿಗೆ



ಪಾವತಿಸುತ್ತಿಲ್ಲ. ನೀರಿನ ಶುಲ್ಕ, ಪೂರ್ಣ ಪ್ರಮಾಣದ ತೆರಿಗೆ ಪಾವತಿಸಿದವರಿಗೆ ಮಾತ್ರ ಮನೆ, ನಿವೇಶನಕ್ಕೆ ಅವಶ್ಯವಿರುವ ಫಾರಂ-3 ದಾಖಲೆಗಳನ್ನು ನೀಡಲಾಗುತ್ತದೆ ಎಂದು ಹೇಳಿದರು. ಪಟ್ಟಣದಲ್ಲಿ ವಿವಿಧೆಡೆ ಚರಂಡಿ, ಫುಟ್ ಪಾತ್ ನಿರ್ಮಾಣ, ನೀರಿನ ಕೊರತೆ ನಿಭಾಸುವಂತೆ ಸಲಹೆಯನ್ನು ಪ.ಪಂ ಸದಸ್ಯರು, ಸಾರ್ವಜನಿಕರಿಗೆ ಸೂಚನೆ ನೀಡಲಾಯಿತು. ಜನರು ವಿಶ್ವಾಸವಿಟ್ಟು ಪಟ್ಟಣ ಪಂಚಾಯತ್ ಚುನಾವಣೆಯಲ್ಲಿ ಆಯ್ಕೆ ಮಾಡಿದ್ದು ಜನರ ಸೇವೆ ಮಾಡುವ ಮೂಲಕ ಜನರಿಗೆ ಅಭಾರಿಯಾಗಿರೋಣವೆಂದು ಚುನಾಯಿತ ಸದಸ್ಯರು ತಿಳಿಸಿದರು.

ಈ ವೇಳೆ ಪ.ಪಂ ಅಧ್ಯಕ್ಷೆ ತನುಶ್ರೀ ಟಿಜೆ ರಾಮಚಂದ್ರ, ಉಪಾಧ್ಯಕ್ಷ ಕಂಠೀರಂಗಪ್ಪ ನಾಯಕ, ಪ.ಪಂ ಸದಸ್ಯರಾದ ಅನಿಲ್ ಬಿಜ್ಜಳ, ಸಂಗಪ್ಪ ಸಜ್ಜನ್, ಸುರೇಶ ಗುಗ್ಗಳಶೆಟ್ರ, ರಾಕೇಶ್ ಕಂಪ್ಲಿ, ಸಿದ್ದೇಶ ಕಲುಬಾಗಿಲಮಠ, ರಾಜಾಸಾಬ ನಂದಾಪುರ, ಹನುಮಂತ ಬಸರಿಗಿಡ, ಶ್ರೀ, ಶೇಷಪ್ಪ ಪೂಜಾರ, ಹುಸೇನಬೀ ಚಳ್ಳಮರದ್, ನಾಮನಿರ್ದೇಶಿತ ಸದಸ್ಯರಾದ ಗಂಗಾಧರ ಚೌಡ್ಕಿ, ಹನುಮೇಶ ಹಡಪದ, ಕಿರಿಯ ಅಭಿಯಂತರು ಮಂಜುನಾಥ ನಾಯಕ, ವಿಷಯ ನಿರ್ವಾಹಕ ಹರೀಶ್ ಉಪಸ್ಥಿತರಿದ್ದರು.

ಕಲಾವಿದ ಆಯಾಝುದ್ದೀನ್ ಪಟೇಲ್ ಗೆ ರೋಷಿನಿ ಪ್ರಶಸ್ತಿ ಪ್ರದಾನ

ಕಲಬುರಗಿ,ಮಾ.29

ಈದ್ ಮಿಲನ್ ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಖ್ಯಾತ ಕಲಾವಿದ ಮುಹಮ್ಮದ್ ಆಯಾಝುದ್ದೀನ್ ಪಟೇಲ್ ಅವರಿಗೆ ಪ್ರತಿಷ್ಠಿತ 'ರೋಷಿನಿ ಪ್ರಶಸ್ತಿ 2026' ನೀಡಿ ಗೌರವಿಸಲಾಯಿತು.

ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್, ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಹಾಗೂ ಮೆಹ್ರೋಜ್ ಖಾನ್ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಕಲಬುರಗಿ ಉತ್ತರ ಮತಕ್ಷೇತ್ರದ ಶಾಸಕಿ ಕಾನೀಜ್ ಫಾತಿಮಾ, ಕಾಂಗ್ರೆಸ್ ಯುವ ನಾಯಕ ಫರಾಝ್ ಉಲ್ ಇಸ್ಲಾಂ, ಕಲಬುರಗಿ ತಾಲೂಕಿನ ಕರ್ನಾಟಕ ಐದು ಗ್ಯಾರಂಟಿಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಹ್ಮರ್ ಇಸ್ಲಾಂ, ಶಾಸಕ ರಹೀಮ್ ಖಾನ್, ಸಚಿವ ಎಚ್.ಕೆ. ಪಾಟೀಲ್, ಸತೀಶ್ ಜಾರಕಿಹೊಳಿ, ಸಿ.ಎಂ. ಇಬ್ರಾಹಿಂ, ರೋಷನ್ ಬೇಗ್? ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಕಳೆದ ಮೂರು ದಶಕಗಳಿಂದ ಕಲೆ, ಸಂಸ್ಕೃತಿ ಮತ್ತು ಪರಂಪರೆಯ ಕ್ಷೇತ್ರಗಳಲ್ಲಿ ಅವರು ನೀಡಿರುವ ಮಹತ್ವದ ಕೊಡುಗೆ ಗಳನ್ನು ಗುರುತಿಸಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

ಗೋಶಾಲೆಗೆ ಒಂದು ಟ್ರ್ಯಾಕ್ಟರ್ ಕಲ್ಲಂಗಡಿ ದೇಣಿಗೆಯಾಗಿ ನೀಡಿದ ರೈತ

ಬಳ್ಳಾರಿ / ಕಂಪ್ಲಿ ,ಮಾ.29

ತಾಲೂಕಿನ ದೇವಸಮುದ್ರ ಕ್ರಾಸ್ ಸಮೀಪದಲ್ಲಿರುವ ಶ್ರೀ ಕಲ್ಯಾಣ ಚೌಕಿಮಠದ ಕಾಮಧೇನು ಗೋಶಾಲೆಯ ಗೋವುಗಳಿಗೆ ಕೊಟ್ಟಾಲ್ ಗ್ರಾಮದ ಪ್ರಗತಿಪರ ರೈತ ಮಾದಿನೇನಿ ನಾಗರಾಜ ಅವರು ಸುಮಾರು ಒಂದು ಟ್ರ್ಯಾಕ್ಟರ್ ನಷ್ಟು ಕಲ್ಲಂಗಡಿ ಹಣ್ಣುಗಳನ್ನು ದೇಣಿಗೆಯಾಗಿ ನೀಡಿದ್ದಾರೆ.

ಮೂರು ಎಕರೆ ಪ್ರದೇಶದಲ್ಲಿ ಕಲ್ಲಂಗಡಿ ಬೆಳೆದಿದ್ದ ರೈತ ನಾಗರಾಜ ಅವರು, ಇತ್ತೀಚೆಗೆ ಮಾರುಕಟ್ಟೆಯಲ್ಲಿ ಹಣ್ಣಿನ ಬೆಲೆ ಕುಸಿದಿರುವುದರಿಂದ ಹಾಗೂ ಕೊಯ್ಯುವ ಕೂಲಿಯೂ ಸಿಗದ ಪರಿಸ್ಥಿತಿಯಿಂದ ಹಣ್ಣುಗಳನ್ನು ಹೊಲದಲ್ಲೇ ಹಾಳು ಮಾಡುವ ಬದಲು ಗೋಶಾಲೆಗೆ ನೀಡಲು ಮುಂದಾಗಿದ್ದಾರೆ. ಸಮಾಜ ಸೇವೆಯಲ್ಲಿ ತೊಡಗಿರುವ ಹಾಗೂ ಗೋವುಗಳಿಗೆ ಆಶ್ರಯ ನೀಡುತ್ತಿರುವ ಗೋಶಾಲೆಗೆ ಇದು ಸಹಾಯವಾಗಲಿದೆ ಎಂದು ತಿಳಿಸಿದ್ದಾರೆ.

ಕಲ್ಯಾಣ ಚೌಕಿಮಠ ಕಾಮಧೇನು ಗೋಶಾಲೆಯ ಮುಖ್ಯಸ್ಥ ಕೆ.ಎಂ. ಬಸವರಾಜ ಶಾಸ್ತ್ರಿಗಳು ಮಾತನಾಡಿ, ಗೋಶಾಲೆಯಲ್ಲಿ ನೂರಾರು ಗೋವುಗಳನ್ನು ಸಾಕಲಾಗುತ್ತಿದೆ. ಈ ಭಾಗದಲ್ಲಿ ಎರಡನೇ ಬೆಳೆ ಇಲ್ಲದ ಕಾರಣ ಮೇವಿನ ಕೊರತೆ ಉಂಟಾಗಿದೆ.



ಇಂತಹ ಸಂದರ್ಭದಲ್ಲಿ ರೈತ ನಾಗರಾಜ ನೀಡಿದ ಕಲ್ಲಂಗಡಿ ಹಣ್ಣುಗಳು ಗೋವುಗಳಿಗೆ ಬಹಳ ಉಪಯೋಗವಾಗಿವೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು. ಗೋಶಾಲೆ ಗುಡ್ಡ ಪ್ರದೇಶದಲ್ಲಿದ್ದು, ಮಳೆ ಅಭಾವದಿಂದ ಬೆಳೆಯಿಲ್ಲದ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ತಾಲೂಕಿನ ಹಾಗೂ ಸುತ್ತಮುತ್ತಲಿನ ರೈತರು ಗೋಶಾಲೆಗೆ ಮೇವು ಒದಗಿಸಲು ಮುಂದಾಗಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೆ.ಎಂ. ಪ್ರದೀಪ, ಮಾದಿನೇನಿ ನಾಗರಾಜ, ಗೋಶಾಲೆಯ ಸಿಬ್ಬಂದಿಗಳು ಹಾಗೂ ಶ್ರೀಮಠದ ಭಕ್ತರು ಉಪಸ್ಥಿತರಿದ್ದರು.

ಕಲಬುರಗಿ ಶರಣಬಸವ ವಿವಿಗೆ ಪಿ.ಪಿ.ಮಲ್ಹೋತ್ರ ಸ್ಮಾರಕ ಪ್ರಶಸ್ತಿ ಪ್ರದಾನ

ಕಲಬುರಗಿ,ಮಾ.29-

ಎಲೆಕ್ಟ್ರಾನಿಕ್ಸ್ ಮತ್ತು ದೂರಸಂಪರ್ಕ ಇಂಜಿನಿಯರಿಂಗ್ ಸಂಸ್ಥೆಯ (ಐಇಟಿಇ) ವತಿಯಿಂದ ದೇಶದ ಅತ್ಯುತ್ತಮ ವಿಶ್ವವಿದ್ಯಾಲಯಗಳಿಗೆ ನೀಡಲಾಗುವ ಪ್ರತಿಷ್ಠಿತ ಪಿ. ಪಿ. ಮಲ್ಹೋತ್ರ ಸ್ಮಾರಕ ಪ್ರಶಸ್ತಿಯನ್ನು ಶರಣಬಸವ ವಿಶ್ವವಿದ್ಯಾಲಯಕ್ಕೆ ಪ್ರದಾನ ಮಾಡಲಾಯಿತು.

ಶನಿವಾರ ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ನಡೆದ ಐಇಟಿಇ ದಕ್ಷಿಣ ವಲಯ ವಿಚಾರ ಸಂಕಿರಣ ಮತ್ತು ಐಎಸ್‌ಎಫ್ ಕಾಂಗ್ರೆಸ್-2026 ಉದ್ಘಾಟನಾ ಸಮಾರಂಭದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಮಾತೋಶ್ರೀ ಪೂಜ್ಯ ಡಾ.ದಾಕ್ಷಾಯಿಣಿ ಅವ್ವಾಜಿ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಮತ್ತು ರಾಷ್ಟ್ರೀಯ ಮಟ್ಟದ ಮನ್ನಣೆಯನ್ನು ಸ್ವೀಕರಿಸಿದ ಮಾತೋಶ್ರೀ ಪೂಜ್ಯ ಡಾ.ದಾಕ್ಷಾಯಿಣಿ ಅವ್ವಾಜಿ, ಈ ಪ್ರಶಸ್ತಿಯನ್ನು ಕೆಲವು ತಿಂಗಳ ಹಿಂದೆ ಐಇಟಿಇಯ ವಾರ್ಷಿಕ ಸಮಾವೇಶದಲ್ಲಿ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಅವರಿಗೆ ಔಪಚಾರಿಕವಾಗಿ ಪ್ರದಾನ ಮಾಡಲಾಗಿತ್ತು ಎಂದು ಹೇಳಿದರು. ನವದೆಹಲಿಯಿಂದ ಬಂದು ಪ್ರಶಸ್ತಿಯನ್ನು ತಮಗೆ ಪ್ರದಾನ ಮಾಡಿದ್ದಕ್ಕಾಗಿ ಐಇಟಿಇಯ ಪದಾಧಿಕಾರಿಗಳಿಗೆ, ವಿಶೇಷವಾಗಿ ಅಧ್ಯಕ್ಷರಾದ ಪ್ರೊ. ಸುನೀಲ್ ಅವರಿಗೆ ಧನ್ಯವಾದ ಅರ್ಪಿಸಿದರು.

ಈ ಪ್ರಶಸ್ತಿಯನ್ನು ಶರಣಬಸವ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಾಧಿಪತಿಗಳಾದ ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರಿಗೆ ಅರ್ಪಿಸುವುದಾಗಿ ಹೇಳಿದ ಅವರು, ವಿಶ್ವವಿದ್ಯಾಲಯಕ್ಕೆ ದೊರೆತ ಈ ರಾಷ್ಟ್ರೀಯ ಮನ್ನಣೆಯು ಸಂಘದ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವಲ್ಲಿ ಮತ್ತು ಅಂತಿಮವಾಗಿ ಶರಣಬಸವ ವಿಶ್ವವಿದ್ಯಾಲಯವನ್ನು ಸ್ಥಾಪಿಸುವಲ್ಲಿ ಡಾ. ಅಪ್ಪಾಜಿ ಅವರ



ಜೀವಮಾನದ ಹೋರಾಟದ ಫಲಿತಾಂಶವಾಗಿದೆ ಎಂದರು.

ಪ್ರತಿಷ್ಠಿತ ಸಂಸ್ಥೆಗಳಿದ ಇಂತಹ ಪ್ರಶಸ್ತಿಗಳನ್ನು ಪಡೆಯುವುದರಿಂದ ಸಂಘ ನಡೆಸುವ ಶಿಕ್ಷಣ ಸಂಸ್ಥೆಗಳನ್ನು ಮತ್ತು ವಿಶ್ವವಿದ್ಯಾಲಯವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಮತ್ತು ಶರಣಬಸವ ವಿಶ್ವವಿದ್ಯಾಲಯವನ್ನು ವಿಶ್ವದ ಅತ್ಯುತ್ತಮ 100 ವಿಶ್ವವಿದ್ಯಾಲಯಗಳಲ್ಲಿ ಒಂದಾಗಿ ಅಭಿವೃದ್ಧಿಪಡಿಸುವ ಡಾ. ಅಪ್ಪಾಜಿ ಅವರ ಕನಸನ್ನು ನನಸಾಗಿಸುವ ಜವಾಬ್ದಾರಿ ಹೆಚ್ಚಾಗಿದೆ ಎಂದು ಹೇಳಿದರು.

ಈ ಸಮಾರಂಭದಲ್ಲಿ ಶರಣಬಸವ ವಿಶ್ವವಿದ್ಯಾಲಯವು ಹಾಜರಿದ್ದ ಎಲ್ಲಾ ಐಇಟಿಇ ಪದಾಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ವಿವಿಧ ಕಾಲೇಜುಗಳು ಮತ್ತು ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಸಂಶೋಧನಾ ಕಾರ್ಯಗಳು ಮತ್ತು ಪೋಸ್ಟರ್ ಪ್ರಸ್ತುತಿ, ಸಂಶೋಧನಾ ಪ್ರಬಂಧ ಪ್ರಸ್ತುತಿ ಮತ್ತು ಇತರ ಚಟುವಟಿಕೆಗಳಿಗಾಗಿ ವಿಭಿನ್ನ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವೆ ಹಾಗೂ ಐಇಟಿಇ ಕಲಬುರಗಿ ಕೇಂದ್ರದ ಅಧ್ಯಕ್ಷರೂ ಆದ ಡಾ.ಲಕ್ಷ್ಮಿ ಪಾಟೀಲ ಮಾಕಾ ಸ್ವಾಗತಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಬಸವರಾಜ ದೇಶಮುಖ, ವಿವಿಯ ಉಪಕುಲಪತಿ ಪ್ರೊ. ಅನಿಲಕುಮಾರ್ ಬಿಡವೆ, ಮೌಲ್ಯಮಾಪನ ಕುಲಸಚಿವ ಡಾ. ಎಸ್. ಎಚ್. ಹೊನ್ನಳ್ಳಿ, ಹಣಕಾಸು ಅಧಿಕಾರಿ ಡಾ. ಕಿರಣ್ ಮಾಕಾ, ಡೀನ್ ಡಾ. ಶಿವಕುಮಾರ್ ಜವಳಿಗಿ, ಡೀನ್ (ಸಂಶೋಧನೆ) ಡಾ. ಸುಜಾತಾ ಮಲ್ಲಾಪುರ ಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

ಇಂಟರ್ನೆಟ್ ಅಗತ್ಯವಿಲ್ಲದೆ ಡೈರೆಕ್ಟ್ ಟು ಮೊಬೈಲ್ ಪ್ರಸಾರ ಸುಲಭ: ಪ್ರೊ. ಸುನೀಲ್

ಇತ್ತೀಚಿನ ತಂತ್ರಜ್ಞಾನಗಳನ್ನು ಬಳಸಿಕೊಂಡು ಮಾಡಿರುವ ಡೈರೆಕ್ಟ್-ಟು-ಮೊಬೈಲ್ ಪ್ರಸಾರ ತಂತ್ರಜ್ಞಾನದ ಬೆಳವಣಿಗೆಯು ಮೊಬೈಲ್‌ಗಳಿಂದ ಡೇಟಾವನ್ನು ವರ್ಗಾಯಿಸುವ ಪ್ರಕ್ರಿಯೆಯನ್ನು ಸುಲಭಗೊಳಿಸುತ್ತದೆ ಮತ್ತು ಇಂಟರ್ನೆಟ್ ಸಂಪರ್ಕದ ಅಗತ್ಯವಿಲ್ಲದೆ ಲೈವ್ ಟೆಲಿವಿಷನ್ ಮತ್ತು ತುರ್ತು ಪರಿಸ್ಥಿತಿಯ ಎಚ್ಚರಿಕೆಗಳಂತಹ ವಿಷಯಗಳನ್ನು ನೇರವಾಗಿ ಮೊಬೈಲ್ ಸಾಧನಗಳಿಗೆ ರವಾನಿಸುತ್ತದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ದೂರಸಂಪರ್ಕ ಇಂಜಿನಿಯರಿಂಗ್ ಸಂಸ್ಥೆಯ (ಐಇಟಿಇ) ಅಧ್ಯಕ್ಷ ಪ್ರೊ. ಸುನೀಲ್ ಹೇಳಿದರು.

ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ಶನಿವಾರ ಐಇಟಿಇ ದಕ್ಷಿಣ ವಲಯ ಸೆಮಿನಾರ್ ಮತ್ತು ಐಇಟಿಇ ವಿದ್ಯಾರ್ಥಿ ವೇದಿಕೆ (ಐಎಸ್‌ಎಫ್) ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯಂತಹ ಹೊಸ ತಂತ್ರಜ್ಞಾನಗಳ ಆಗಮನವು ತಾಂತ್ರಿಕ ಶಿಕ್ಷಣ ಮತ್ತು ಸಂಶೋಧನಾ ಚಟುವಟಿಕೆಗಳ ಅಡೆತಡೆಗಳನ್ನು ನಿವಾರಿಸುತ್ತಿದೆ ಮತ್ತು ಅಂತರ್‌ವಿಭಾಗ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ಹೆಚ್ಚಿನ ವಿಶ್ವಾಸಾರ್ಹತೆಯನ್ನು ಪಡೆಯುತ್ತಿವೆ ಎಂದು ತಿಳಿಸಿದರು.

ದೇಶವಾಸಿಗಳಿಗೆ ಕೈಗೆಟುಕುವಂತೆ ಮಾಡಲು ತಂತ್ರಜ್ಞಾನದಲ್ಲಿ ಸ್ವಾವಲಂಬನೆಯ ಅಗತ್ಯವನ್ನು ಒತ್ತಿ ಹೇಳಿದ ಪ್ರೊ. ಸುನೀಲ್, ಮೇಕ್ ಇನ್ ಇಂಡಿಯಾ ಕೇವಲ ಉತ್ಪಾದನಾ ವಲಯಕ್ಕೆ ಸೀಮಿತವಾಗಬಾರದು, ಬದಲಾಗಿ ಇತರ ದೇಶಗಳ ನಾವೀನ್ಯತೆಗಳನ್ನು ಅವಲಂಬಿಸದೆ ಉದಯೋನ್ಮುಖ ಪ್ರದೇಶಗಳಲ್ಲಿ, ದೇಶವು ಸ್ವಾವಲಂಬಿಯಾಗಲು ಅನುವು ಮಾಡಿಕೊಡಲು ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ವಿಸ್ತರಿಸಬೇಕು ಎಂದು ಅಭಿಪ್ರಾಯಪಟ್ಟರು.

ಡೈರೆಕ್ಟ್-ಟು-ಮೊಬೈಲ್ ಬ್ರಾಡ್‌ಕಾಸ್ಟಿಂಗ್ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ವಹಿಸಿರುವ ಐಐಟಿ ಕಾನ್ಪುರ್ ಅಭಿವೃದ್ಧಿಯ ಪ್ರಮುಖ ಕ್ಷೇತ್ರಗಳಲ್ಲಿ ಮೀಸಲಾದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯವು ತಂತ್ರಜ್ಞಾನಕ್ಕಾಗಿ ಇತರರನ್ನು ಅವಲಂಬಿಸದೇ, ದೇಶವು ಹೆಚ್ಚು ಸ್ವಾವಲಂಬಿಯಾಗಲು ಹೇಗೆ ಸಹಾಯ ಮಾಡುತ್ತದೆ ಎಂಬುದಕ್ಕೆ ಉದಾಹರಣೆ ಯಾಗಿದೆ ಎಂದರು.

ಡೈರೆಕ್ಟ್-ಟು-ಮೊಬೈಲ್ ತಂತ್ರಜ್ಞಾನದ ಕಾರ್ಯನಿರ್ವಹಣೆಯ ಬಗ್ಗೆ ಮಾತನಾಡಿದ ಪ್ರೊ.ಸುನೀಲ್, ತಂತ್ರಜ್ಞಾನವು ಐಪಿ-ಆಧಾರಿತ ಮಲ್ಟಿಮೀಡಿಯಾ ವಿಷಯವನ್ನು ರವಾನಿಸಲು ಭೂಮಂಡಲದ ಟಿವಿ ಪ್ರಸಾರ ಗಾಳಿಯ ಅಲೆಗಳನ್ನು ಬಳಸುತ್ತದೆ. ಸೆಲ್ಯುಲಾರ್ ನೆಟ್‌ವರ್ಕ್ ಅವಲಂಬಿಸುವ ಬದಲು, ವಿಶೇಷ ರಿಸೀವರ್ ಚಿಪ್ ಹೊಂದಿರುವ ಮೊಬೈಲ್ ಫೋನ್‌ನಿಂದ ಈ ಸಂಕೇತಗಳನ್ನು ತೆಗೆದುಕೊಳ್ಳಬಹುದು ಎಂದರು.



ಬಡವರ ಆರೋಗ್ಯ ಸೇವೆಗೆ ನಮ್ಮ ಕ್ಲಿನಿಕ್ ಉದ್ಘಾಟನೆ

ಕಲಬುರಗಿ,ಮಾ.29

ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಹೊಸದಾಗಿ ಸ್ಥಾಪಿಸಲಾದ ನಮ್ಮ ಕ್ಲಿನಿಕ್ ಅನ್ನು ಕಲಬುರಗಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಬಡವರು ಹಾಗೂ ಜಿಲ್ಲೆಯ ವಿವಿಧ ತಾಲೂಕು ಮತ್ತು ಹಳ್ಳಿಗಳಿಂದ ಬರುವ ಪ್ರಯಾಣಿಕರು, ಜೊತೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಈ ಕ್ಲಿನಿಕ್ ಸ್ಥಾಪಿಸಲಾಗಿದೆ ಎಂದು ಹೇಳಿದರು.

ಈಗಾಗಲೇ ಕಲಬುರಗಿ ಜಿಲ್ಲೆಯಲ್ಲಿ 20 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ನಗರದಲ್ಲೇ 14 ಕ್ಲಿನಿಕ್‌ಗಳು ಸಾರ್ವಜನಿಕರಿಗೆ ಆರೋಗ್ಯ ಸೇವೆ ನೀಡುತ್ತಿರುವುದಾಗಿ ಮಾಹಿತಿ ನೀಡಿದರು.

ಇದೇ ವೇಳೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಂ.ವೈ. ಪಾಟೀಲ್ ಮಾತನಾಡಿ, ಇದು ಉತ್ತಮ ಯೋಜನೆಯಾಗಿದ್ದು ಬಡವರಿಗೆ ಆರೋಗ್ಯ ಸೇವೆ ಒದಗಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆ ಎಂದರು. ಬಸ್ ನಿಲ್ದಾಣದಲ್ಲಿ ಪ್ರತಿ ಗಂಟೆಗೆ ಧ್ವನಿವರ್ಧಕದ ಮೂಲಕ ಈ ಸೇವೆಯ ಬಗ್ಗೆ ಮಾಹಿತಿ ನೀಡುವಂತೆ ಕೆಕೆಆರ್‌ಟಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಶರಣಬಸಪ್ಪ ಕ್ಯಾತನಾಳ ಅವರು ಮಾತನಾಡಿ, 2023ರಿಂದ ಕಲಬುರಗಿ ಜಿಲ್ಲೆಯಲ್ಲಿ ಸುಮಾರು 4 ಲಕ್ಷಕ್ಕಿಂತ ಹೆಚ್ಚು ಹೊರರೋಗಿಗಳಿಗೆ ಸೇವೆ ನೀಡಲಾಗಿದ್ದು, 55 ಸಾವಿರಕ್ಕೂ ಹೆಚ್ಚು ಲ್ಯಾಬ್ ಪರೀಕ್ಷೆಗಳು ನಡೆಸಲಾಗಿದೆ ಎಂದು ತಿಳಿಸಿದರು.

ಸುಮಾರು 4000 ಯೋಗ ಶಿಬಿರಗಳನ್ನು ಆಯೋಜಿಸಿ 50 ಸಾವಿರಕ್ಕೂ ಹೆಚ್ಚು ಜನರಿಗೆ ಯೋಗಾಭ್ಯಾಸ ಮಾಡಿಸಲಾಗಿದ್ದು, 650 ಆರೋಗ್ಯ ಶಿಬಿರಗಳ ಮೂಲಕ 25 ಸಾವಿರಕ್ಕೂ ಹೆಚ್ಚು ಜನರಿಗೆ ಚಿಕಿತ್ಸೆ ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆಕೆಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಸುನೀಲಕುಮಾರ್ ಚಂದರಗಿ, ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಚಂದ್ರಕಾತ್ ನರಿಬೋಳ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಕೇಶ್ ಕಾಂಬಳೆ, ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ವಿವೇಕಾನಂದ ರೆಡ್ಡಿ, ನಗರ ಕಾರ್ಯಕ್ರಮ ವ್ಯವಸ್ಥಾಪಕ ಶ್ರೀಕಾಂತ್ ಸ್ವಾಮಿ, ಆಡಳಿತ ವೈದ್ಯಾಧಿಕಾರಿ ಡಾ. ಬಾಬುರಾವ ಚವಾಣ್, ನಮ್ಮ ಕ್ಲಿನಿಕ್ ವೈದ್ಯಾಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಆರ್‌ಸಿಎಚ್ ಅಧಿಕಾರಿ ಡಾ. ಸಿದ್ದು ಪಾಟೀಲ್ ಸ್ವಾಗತಿಸಿದರು.

ಒಂದನೇಯ ಪುಟದಿಂದ

ಸಮಸಮಾಜ ನಿರ್ಮಾಣಕ್ಕಾಗಿ ಅಗ್ನಿ ಬನ್ನಿ ರಾಯಸ್ವಾಮಿ ಅವತರಿಸಿದರು: ದಂಡಪ್ಪ ಬಿರಾದಾರ

ಅಗ್ನಿಯ ಕ್ಷತ್ರಿಯ ಕುಲದೈವ ಅಗ್ನಿ ಬನ್ನಿರಾಯ ಸ್ವಾಮಿ ಜಯಂತಿಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಾರೆ. ವಿಶೇಷವಾಗಿ ತಿಗಳ ಸಮುದಾಯದವರು ತೋಟಗಾರಿಕೆ ಮತ್ತು ಉದ್ಯಾನ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಬೆಂಗಳೂರಿನಲ್ಲಿ ಮಹತ್ವದ ಉದ್ಯಾನ ನಿರ್ಮಾಣ ಮಾಡಿದ್ದಾರೆ.

ತಿಗಳ ಸಮುದಾಯದ ಜನರು ಈ ಕ್ಷೇತ್ರದಲ್ಲಿ ಹೆಚ್ಚು ಪರಿಣಿತಿ ಹೊಂದಿದ್ದರು ಎಂದು ಡಾ. ಬಿರಾದಾರ ಹೇಳಿದರು.

ಈ ಸಂದರ್ಭದಲ್ಲಿ ಮೋಹನ್ ಸಿರಿನ್ ಹಸಲ್ಕಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿ ವಿನೋದ್, ಶೈಲಜಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರೈತರಿಗೆ ಸಮರ್ಪಕವಾಗಿ ನೀರು ಬಾರದೆ ಇದ್ದರೆ ಹೋರಾಟ ಅನಿವಾರ್ಯ: ಪ್ರಭಾಕರ ಪಾಟೀಲ್

ಅಭಾವ ಎದುರಾದ್ದರಿಂದ ಬೆಳೆಗಳು ರಕ್ಷಣೆ ಮಾಡುವುದೇ ದೊಡ್ಡ ಸವಾಲಾಗಿದೆ. ಇಂತಹ ಪರಿಸ್ಥಿತಿ ನಿರ್ಮಾಣವಾದ್ದರಿಂದ ರೈತರು ಆತಂಕ ಪಡುವಂತಾಗಿದೆ. ಆಕಾಲಿಕ ಆಲಿಕಲ್ಲು ಮಳೆಯಿಂದ ನೂರಾರು ಎಕರೆ ಪ್ರದೇಶದಲ್ಲಿ ವಿವಿಧ ಬೆಳೆಗಳು ನಷ್ಟವಾಗಿದ್ದು, ಕೈಸುಟ್ಟುಕೊಂಡಿರುವ ರೈತರಿಗೆ ತಾಲೂಕು ಆಡಳಿತ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಕಂದಾಯ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳು ಜಂಟಿ ಸಮೀಕ್ಷೆ ಮಾಡಿದ್ದು, ವಿಶೇಷ ಪ್ರಕರಣವೆಂದು ಜಿಲ್ಲಾಡಳಿತ ಪರಿಗಣಿಸುವ ಮೂಲಕ ಹೆಚ್ಚಿನ ಪರಿಹಾರ ಘೋಷಣೆ ಮಾಡಬೇಕೆಂದು ಒತ್ತಾಯಿಸಿದರು. 1444 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ನಾರಾಯಣಪುರ ಬಲದಂಡೆ ಕಾಲುವೆಗಳ ನವೀಕರಣ ಕಾಮಗಾರಿ ಅಪೂರ್ಣ ಸ್ಥಿತಿಯಲ್ಲಿದ್ದು, ಬೇಸಿಗೆ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ದೂರಿದರು. ರೈತ ಸಂಘಗಳ ನಿರಂತರ ಹೋರಾಟಕ್ಕೆ ಅಧಿಕಾರಿಗಳು ಸ್ಪಂದನೆ ಮಾಡುತ್ತಿಲ್ಲ. ಏ.1ರಿಂದ 7ನೇ ತಾರೀಖಿನವರೆಗೆ ನೀರು ಹರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಗೇಟ್ ಗಳ ನಿರ್ವಹಣೆ ಕೊರತೆ ಹಿನ್ನೆಲೆ ಕೊನೆ ಭಾಗದ ರೈತರಿಗೆ ಸಮರ್ಪಕವಾಗಿ ನೀರು ಬರುತ್ತಿಲ್ಲ. ಹೀಗಾಗಿ ಏ.1ರಿಂದ 10ವರೆಗೆ ನೀರು ಹರಿಸಬೇಕೆಂದು ಅಧಿಕಾರಿಗಳಿಗೆ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಹುಸೇನ್‌ಬಾಷ್ ಸೋಮನಮರಡಿ, ಹುನುಮಗೌಡ ನಾಯಕ ಜಾಲಹಳ್ಳಿ, ಉಪಪಾತಿಗೌಡ ನಗರಗುಂಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬೀದಿಬದಿ ವ್ಯಾಪಾರಿಗಳಿಗೆ ವೈಂಡಿಂಗ್ ಜೋನ್ ನಿರ್ಮಾಣಕ್ಕೆ ಆಗ್ರಹ : ಪಾಲಿಕೆ ವಿರುದ್ಧ ಹೋರಾಟದ ಎಚ್ಚರಿಕೆ

2014ರ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಬೀದಿಬದಿ ವ್ಯಾಪಾರಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ಸಹಕಾರ ನೀಡಬೇಕಿದೆ ಎಂದು ನೆನಪಿಸಿದ ಅವರು, ಪಾಲಿಕೆ ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟಕ್ಕೆ ಮುಂದಾಗುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಯೇಸು ಮಿತ್ರ, ಶ್ರೀನಿವಾಸ ಕಲವಲ ದೊಡ್ಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗ್ಯಾಸ್ ಏಜೆನ್ಸಿ - ಪೆಟ್ರೋಲ್ ಬಂಕ್ ಮಾಲಿಕರ ಸಭೆ ಇಂಧನ ಅಭಾವವಿಲ್ಲ ಅನಗತ್ಯ ಗಾಬರಿ ವದಂತಿಗಳಿಗೆ ಕಿವಿಗೊಡಬೇಡಿ - ಅಶೋಕಪವಾರ

ಮಾಡಬೇಕಾಗಿರುವುದರಿಂದ ಸರಬರಾಜಿನಲ್ಲಿ ವ್ಯತ್ಯಯವಾಗಿತು. ಇದರಿಂದ ಜನರು ಗಾಭರಿ ಬಿದ್ದು ಬಂಕ್ ಗಳಿಗೆ ಆಗಮಿಸಿ ಜನದಟ್ಟಣೆ ಹೆಚ್ಚಾಗಿತು. ಈಗ ಸರಬರಾಜು ಸುಗಮವಾಗಿ ಯಾವುದೇ ರೀತಿಯ ಪೆಟ್ರೋಲ್ ಅಥವಾ ಡೀಸೆಲ್ ಶಾರ್ಟೇಜ್ ಇಲ್ಲ. ಯಾವುದೇ ಬಂಕ್ ನಲ್ಲಿ ಸ್ಟಾಕ್ ಇಲ್ಲವೆಜದು ಹೇಳಿದರೆ ತಿಳಿಸಿ ಸಾರ್ವಜನಿಕರಿಗೆ ಕರೆ ಮಾಡಿದರು. ಜನದಟ್ಟಣೆಯಾಗದಂತೆ ಮಾಡಬೇಕು. ಗ್ಯಾಸ್ ಏಜೆನ್ಸಿ ಯವರು ಸಹ ಗೃಹ ಬಳಕೆಗೆ ತೊಂದರೆಯಾಗದಂತೆ ನೋಡಿಕೊಳಬೇಕು. ಹೊಟೆಲ್, ರೆಸ್ಟೋರೆಂಟ್ ಗಳಿಗೆ ಮಾರಾಟ ಮಾಡಿದರೆ ಕ್ರಮಕೈಗೊಳಲಾಗುವುದು ಎಂದರು ಪೇಟ್ರೊಲ್ ಬಂಕಗಳ ಮಾಲಿಕರಾದ ಬಸವರಾಜ ಗಡ್ಡ, ಸುರೇಶ ಗಬ್ಬೂರು, ಸ್ವಾಮಿ, ಹರ್ಷವರ್ಧನ ಸೇರಿದಂತೆ ಇನ್ನಿತರರು ಇದರು

ಗಂಗಾವತಿಯಲ್ಲಿ 35 ಟನ್ ಪಿಡಿಎಸ್ ಅಕ್ಕಿ ಅಕ್ರಮ ಸಾಗಣೆ: ಮಾನ್ವಿ ಪ್ರಭಾವಿಗಳ ಮೇಲೆ ಎಫ್‌ಐಆರ್

ಗಂಗಾವತಿ: ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪದ ಮೇಲೆ ಇಲ್ಲಿನ ಆಹಾರ ಇಲಾಖೆಯ ನಿರೀಕ್ಷಕ ಶೇಖರಪ್ಪ ನೀಡಿದ ದೂರಿನ ಮೇರೆಗೆ ಮಾನ್ವಿಯ ಪ್ರಭಾವಿ ನಾಯಕರ ಮೇಲೆ ನಗರಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾನ್ವಿಯ ವೀರಭದ್ರೇಶ್ವರ ಇಂಡಸ್ಟ್ರೀಜ್ ರೈಸ್ಮಿಲ್ ಮಾಲೀಕರಾದ ಬಸವನಗೌಡ ಹಾಲ್ದಾಳ್, ವೀರಭದ್ರೇಶ್ವರ ಹಾಲ್ದಾಳ್, ಮತ್ತೊಬ್ಬ ಪ್ರಭಾವಿ ರಾಯಚೂರಿನ ವೆಂಕಟರೆಡ್ಡಿ, ಕೊಪ್ಪಳ ತಾಲ್ಲೂಕಿನ ಕೂಕನಪಳ್ಳಿಯ ಮಾಯಾಮಾಯ ಟ್ರೇಡರ್ಸ್ ಮಾಲೀಕ ಯಮನೂರಪ್ಪ ಎಂಬುವರ ಮೇಲೆ ದೂರು ದಾಖಲಾಗಿದೆ.

ರಾಜ್ಯ ಸರ್ಕಾರ ನಾಗರಿಕರ ಸರಬರಾಜು ಇಲಾಖೆಯ ಮೂಲಕ ಬಡವರಿಗೆಂದು ಪಡಿತರ ಆಹಾರ ಧಾನ್ಯ ಪೂರೈಕೆಯಡಿ ನೀಡಿದ್ದ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದು, ಈ ಮೂಲಕ ಅಗತ್ಯ ವಸ್ತುಗಳ ಕಾಯ್ದೆ 1955ರ ಕಲಂ 3 ಮತ್ತ 7 ಉಲ್ಲಂಘಿಸಿದ್ದು, ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಶೇಖರಪ್ಪ ದೂರಿನಲ್ಲಿ ತಿಳಿಸಿದ್ದಾರೆ.

ಮಾರುಕಟ್ಟೆ ಮೌಲ್ಯದ ಸಮಾರು ಹತ್ತು ಲಕ್ಷ ರೂಪಾಯಿ ಮೊತ್ತದ 35.8 ಟನ್ ಪ್ರಮಾಣದ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಕೊಪ್ಪಳದ ಕೂಕನಪಳ್ಳಿಯಿಂದ ಮಾನ್ವಿಯ ವೀರಭದ್ರೇಶ್ವರ ರೈಸ್ ಮಿಲ್‌ಗೆ ಸಾಗಿಸುತ್ತಿದ್ದ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು ಇದನ್ನು ಪತ್ತೆ ಹಚ್ಚಿ ರೆಡ್‌ಹ್ಯಾಂಡಾಗಿ ಹಿಡಿದು ಆಹಾರ ಇಲಾಖೆಯ ವಶಕ್ಕೆ ಒಪ್ಪಿಸಿದರು.

ಬಿಸಿಲಿನ ತೀವ್ರತೆ ನಡುವೆ ಸಾರ್ವಜನಿಕರಿಗೆ ತಂಪು ನೀರಿನ ಸೇವೆ ಮಡಿವಾಳ ಸಮಾಜದ 20 ವರ್ಷದ ನಿಸ್ವಾರ್ಥ ಕಾರ್ಯ



ರಾಯಚೂರು, ಮಾ.29-

ನಗರದಲ್ಲಿ ಹೆಚ್ಚುತ್ತಿರುವ ಬೇಸಿಗೆಯ ಬಿಸಿಲಿನ ತೀವ್ರತೆಯ ನಡುವೆ ಸಾರ್ವಜನಿಕರ ದಾಹ ತೀರಿಸಲು ಮಡಿವಾಳ ಸಮಾಜದ ಯುವಕರು ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಸ್ಥಾಪಿಸಿ ಮಾನವೀಯ ಸೇವೆಗೆ ಮುಂದಾಗಿದ್ದಾರೆ.

ನಗರದ ಬೃಹಸ್ಪತಿವಾರಪೇಟೆ ಮತ್ತು ಮಕ್ತಲಪೇಟೆ ಮಧ್ಯದಲ್ಲಿರುವ ಶ್ರೀ ಭದ್ರಕಾಳಿ ಸಹಿತ ವೀರಭದ್ರೇಶ್ವರ ದೇವಸ್ಥಾನದ ಎದುರು ಮಡಿವಾಳ ಸಮಾಜ ಹಿಂದುಳಿದ ಜಾತಿಗಳ ಒಕ್ಕೂಟ ಯುವ ಘಟಕದ ಜಿಲ್ಲಾಧ್ಯಕ್ಷರು ಹಾಗೂ ಕರ್ನಾಟಕ ಚಾಲಕರ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಜಿ. ವೆಂಕಟೇಶ ಮಡಿವಾಳ ಅವರ ನೇತೃತ್ವದಲ್ಲಿ ಈ ಅರವಟ್ಟಿಗೆ ಆರಂಭಿ ಸಲಾಯಿತು.

ನಗರ ಶಾಸಕ ಡಾ. ಎಸ್. ಶಿವರಾಜ ಪಾಟೀಲ ರಿಬ್ಬನ್ ಕತ್ತರಿಸಿ ಉದ್ಘಾಟನೆ ನೆರವೇರಿಸಿ, ಸಾರ್ವಜ ನಿಕರಿಗೆ ನೀರು ವಿತರಿಸುವುದ ರೊಂದಿಗೆ ತಾವೇ ನೀರು ಸೇವಿಸುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಸ್ಪರ್ಶ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಕಳೆದ ಎರಡು ದಶಕಗಳಿಂದ ನಿರಂತರವಾಗಿ ಬೇಸಿಗೆ ಸಂದರ್ಭದಲ್ಲಿ ಸಾರ್ವಜನಿಕರಿಗಾಗಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಸೇವೆ ಎಂದು ಹೇಳಿದರು. ಇಂತಹ ಸಮಾಜಮುಖಿ ಕಾರ್ಯಗಳು ಇತರ ಸಂಘಟನೆಗಳಿಗೆ ಪ್ರೇರಣೆಯಾಗಬೇಕು ಎಂದರು.

ನಗರದ ವಿವಿಧ ಭಾಗಗಳಲ್ಲಿಯೂ ಯುವಕರು ಹಾಗೂ ಸಂಘ ಸಂಸ್ಥೆಗಳು ಅರವಟ್ಟಿಗೆಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ನೆರವಾಗುತ್ತಿರುವುದು ಸಂತೋಷದ ಸಂಗತಿ ಎಂದು ಅಭಿಪ್ರಾಯಪಟ್ಟ ಅವರು, ಈ ಸೇವೆ ಇನ್ನಷ್ಟು ವಿಸ್ತಾರವಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಆರ್.ಡಿ.ಎ. ಮಾಜಿ ಅಧ್ಯಕ್ಷರಾದ ವೈ. ಗೋಪಾಲರೆಡ್ಡಿ, ಜಂಬಣ್ಣ (ಮಡಿವಾಳ ಸಮಾಜ ಜಿಲ್ಲಾಧ್ಯಕ್ಷರು), ಆಂಜನೇಯ್ಯ, ಚಂದ್ರು, ಮಧು, ಶಿವಕುಮಾರ ನೆಲಹಾಲ ಸೇರಿದಂತೆ ಅನೇಕ ಗಣ್ಯರು ಹಾಗೂ ಮಡಿವಾಳ ಸಮಾಜದ ಯುವಕರು ಉಪಸ್ಥಿತರಿದ್ದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆರೋಗ್ಯ ತಪಾಸಣೆ ಶಿಬಿರ

ಆರೋಗ್ಯದ ಸಮತೋಲನ ಅಗತ್ಯ: ನ್ಯಾ.ಕೆ.ಜಿ. ಶಾಂತಿ

ಬಳ್ಳಾರಿ,ಮಾ.29

ಆರೋಗ್ಯ ಎಂಬುದು ಪ್ರತಿಯೊಬ್ಬರ ಜೀವನದಲ್ಲಿ ಬಹಳ ಮುಖ್ಯವಾದದ್ದು. ಶಾರೀರಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯದ ಸಮತೋಲನವೂ ಮುಖ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಜಿಲ್ಲಾ ನ್ಯಾಯಾಂಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನ್ಯಾಯಾಲಯದ ಸಿಬ್ಬಂದಿಗಳಿಗಾಗಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿದ್ದಾಗ ಮಾತ್ರ ನಾವು ಯಾವುದೇ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡಲು ಸಾಧ್ಯವಾಗುತ್ತದೆ ಎಂದರು.

ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಮಹಿಳೆಯರು ಸದಾ ಮನೆಯ ಕೆಲಸ ಅಥವಾ ಕಚೇರಿಯ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಇದರಿಂದಾಗಿ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಅವರಿಗೆ ಕಷ್ಟವಾಗುತ್ತಿದೆ ಎಂದರಲ್ಲದೇ, ಇಂತಹ ಶಿಬಿರಗಳು ಮಹಿಳೆಯರಿಗೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಉತ್ತಮ ವೇದಿಕೆಯಾಗಲಿವೆ ಎಂದು ಅವರು ಅಭಿಪ್ರಾಯಪಟ್ಟರು.



ಶಿಬಿರದಲ್ಲಿ ಭಾಗವಹಿಸಿರುವ ನುರಿತ ವೈದ್ಯರಿಂದ ಮಹಿಳೆಯರು ಸೂಕ್ತ ಸಲಹೆ, ಸೂಚನೆ ಹಾಗೂ ಚಿಕಿತ್ಸೆ ಯನ್ನು ಪಡೆದುಕೊಳ್ಳಬೇಕು ಮತ್ತು ತಮ್ಮ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಶಿಬಿರ ಆಯೋಜನೆಗೆ ಅನುವು ಮಾಡಿಕೊಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಜಿಲ್ಲಾ ಶಸ್ತ್ರ ಚಿಕಿತ್ಸ ಕರಿಗೆ ಅಭಿನಂದನೆ ತಿಳಿಸಿದರು.

ಬಳಿಕ ನ್ಯಾಯಾಧೀಶರು ಸಾಮಾನ್ಯ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಈ ಸಂದರ್ಭದಲ್ಲಿ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಜಿ.ಪ್ರಮೋದ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್.ಹೊಸಮನೆ, ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ರಾಘವೇಂದ್ರ, ಗೌಡ.ಬಿ.ಜಿ., ಪ್ರಿನ್ಸಿಪಲ್ ಕೌಟುಂಬಿಕ ನ್ಯಾಯಾಧೀಶರಾದ ವೆಂಕಟೇಶ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಇಬ್ರಾಹಿಂ ಎಂ.ಮುಜಾವರ್, ಒಂದನೇ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ನಸ್ರತ್ ಮುಖ್ತಾರ್ ಅಹ್ಮದ್ ಖಾನ್, ಪ್ರಿನ್ಸಿಪಲ್ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ನಾಗೇಶ್ ನಾಯ್ಕ, 1ನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಸಿದ್ದಲಿಂಗಯ್ಯ ಗಂಗಾಧರ ಮಠ, 3ನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಮುದುಕಪ್ಪ ಒಡನ್ ಸೇರಿದಂತೆ ಜಿಲ್ಲಾ ನ್ಯಾಯಾಲಯದ ಅಧಿಕಾರಿ-ಸಿಬ್ಬಂದಿ ವರ್ಗ ಭಾಗವಹಿಸಿದ್ದರು.

ಕನಕಗಿರಿ: ಪಪಂ ಅಧ್ಯಕ್ಷೆ ಸರಕಾರಿ ಆಸ್ಪತ್ರೆಗೆ ಹಠಾತ್ ಭೇಟಿ; ಪರಿಶೀಲನೆ

ಕೊಪ್ಪಳ,ಮಾ.29

ಕನಕಗಿರಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತನುಶ್ರೀ ಟಿ.ಜೆ. ರಾಮಚಂದ್ರ ಅವರು ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶುಕ್ರವಾರ ಹಠಾತ್ ಭೇಟಿ ನೀಡಿ ರೋಗಿಗಳ ಅಹವಾಲುಗಳನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ವೈದ್ಯರು ಕರ್ತವ್ಯದ ಮೇಲೆ ಇರಲಿಲ್ಲ; ರೋಗಿಗಳು ತಪಾಸಣೆಗಾಗಿ ಕಾದು ಕುರ್ಚಿಗಳಲ್ಲೇ ಮಲಗಿದ್ದರು ಎಂದು ತನುಶ್ರೀ ಅವರು ಪತ್ರಕರ್ತರಿಗೆ ತಿಳಿಸಿದರು.

ಸ್ತ್ರೀರೋಗ ತಜ್ಞೆ ಡಾ. ಈಶ್ವರ ಸವಡಿ ಅವರು ಮಾ.16ರಂದು ಈ ಆಸ್ಪತ್ರೆಗೆ ವರ್ಗಾವಣೆಗೊಂಡಿದ್ದರೂ, ಇಂದಿನ ತನಕ ಕರ್ತವ್ಯಕ್ಕೆ ಹಾಜರಾಗಿಲ್ಲ ಎಂದು ದೂರಿದರು.

ಈ ಕುರಿತು ಡಾ. ಸವಡಿ ಅವರಿಗೆ ದೂರವಾಣಿ ಕರೆ ಮಾಡಿದ ತನುಶ್ರೀ ಅವರು, ವರ್ಗಾವಣೆಗೊಂಡು ಹತ್ತು ದಿನಗಳಾದರೂ ಒಂದೇ ದಿನವೂ ಕೆಲಸಕ್ಕೆ ಹಾಜರಾಗಿಲ್ಲ ಏಕೆ ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಡಾ. ಈಶ್ವರ ಸವಡಿ ಅವರು, ''ಮೇಲಾಧಿಕಾರಿಗಳ ಸೂಚನೆ ಮೇರೆಗೆ ವಿವಿಧೆಡೆ ನಡೆಯುವ ಆರೋಗ್ಯ ಶಿಬಿರಗಳಲ್ಲಿ ಭಾಗವಹಿಸುತ್ತಿದ್ದೇನೆ. ಅಧಿಕಾರಿಗಳು ಆಸ್ಪತ್ರೆಯಲ್ಲೇ ಉಳಿದು ಕೆಲಸ ಮಾಡಲು ಸೂಚನೆ ನೀಡಿದರೆ ಇಲ್ಲಿಯೇ ಕೆಲಸ ಮಾಡುತ್ತೇನೆ'' ಎಂದು ತಿಳಿಸಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದ ತನುಶ್ರೀ ಅವರು, ಮಹಿಳೆಯರು ಹಾಗೂ ಇತರೆ ರೋಗಿಗಳ ಆರೋಗ್ಯದ ಹಿತದೃಷ್ಟಿಯಿಂದ ಡಾ. ಸವಡಿ ಅವರನ್ನು ಶಿಬಿರಗಳ ಬದಲಾಗಿ ಇಲ್ಲಿಯೇ ಪೂರ್ಣ ಪ್ರಮಾಣದಲ್ಲಿ ಸೇವೆ ಮಾಡುವಂತೆ ಆದೇಶ ನೀಡುವಂತೆ ಕೋರಿದರು.

ಚುಚ್ಚುಮದ್ದು ತಜ್ಞೆ ಡಾ. ಸುಜಾತ ಅವರು ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ; ಆಸ್ಪತ್ರೆಗೆ ಬರುವುದು ಅಪರೂಪವಾಗಿದೆ. ಹೀಗಾದರೆ ಬಡವರ ಆರೋಗ್ಯದ ಗತಿ ಏನು ಎಂದು ತನುಶ್ರೀ ಖಾರವಾಗಿ ಪ್ರಶ್ನಿಸಿದರು.

ಆರೋಗ್ಯ ಕೇಂದ್ರದಲ್ಲಿ ವೈದ್ಯರು ಸಮಯಕ್ಕೆ ಸರಿಯಾಗಿ ಕೆಲಸ ಮಾಡಬೇಕು; ಇಲ್ಲವಾದರೆ ಮೇಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು ಎಂದು ಅವರು ಎಚ್ಚರಿಸಿದರು. ಆಸ್ಪತ್ರೆಯಲ್ಲಿ ಸೊಳ್ಳೆಗಳ ಕಾಟವಿದ್ದು, ಸಿಬ್ಬಂದಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ವೆಂಕೋಬ ಭೋವಿ, ರಾಜು ಬೆಲ್ಲಂಕೊಂಡಿಮಠ, ಸಾದಿಕ್ ಪಾಷ ಬೀಡಿ, ಹನುಮೇಶ ವಾಲೇಕಾರ ಇತರರು ಉಪಸ್ಥಿತರಿದ್ದರು.

ಶುಕ್ರವಾರ ಆಸ್ಪತ್ರೆಯಲ್ಲಿ ಡಾ. ಶರಣೆಗೌಡ ಹೇರೂರು ಹಾಗೂ ಇತರೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದರು. ಊಟದ ಸಮಯದಲ್ಲಿ

ಭೇಟಿ ನೀಡಿದ ಕಾರಣ ಇತರೆ ಕೆಲಸಗಾರರು ಇರಲಿಲ್ಲ; ಹೀಗಾಗಿ ರೋಗಿಗಳು ವಿಶ್ರಾಂತಿಗಾಗಿ ಕುರ್ಚಿಗಳಲ್ಲೇ ಮಲಗಿದ್ದರು ಎಂದು ಹೆಸರು ಬಯಸದ ಆರೋಗ್ಯ ಇಲಾಖೆಯ ಸಿಬ್ಬಂದಿಯೊಬ್ಬರು ವಾರ್ತಾ ಭಾರತಿಗೆ ತಿಳಿಸಿದರು.

ಮಾನಸಿಕ ಆರೋಗ್ಯದ ಸಮತೋಲನ ಮುಖ್ಯ



ಬಳ್ಳಾರಿ,ಮಾ.29-

'ಆರೋಗ್ಯ ಎಂಬುದು ಪ್ರತಿಯೊಬ್ಬರ ಜೀವನದಲ್ಲಿ ಬಹಳ ಮುಖ್ಯವಾದದ್ದು. ಶಾರೀರಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯದ ಸಮತೋಲನವೂ ಮುಖ್ಯ' ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ. ಶಾಂತಿ ಹೇಳಿದರು.

ಪಟ್ಟಣದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಜಿಲ್ಲಾ ನ್ಯಾಯಾಂ ಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು. ಸದಾ ಮನೆಯ ಕೆಲಸ ಅಥವಾ ಕಚೇರಿಯ ಕೆಲಸಗಳಲ್ಲಿ ನಿರತರಾದ ಮಹಿಳೆಯರಿಗೆ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಇಂತಹ ಶಿಬಿರಗಳು ಮಹಿಳೆಯರಿಗೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಉತ್ತಮ ವೇದಿಕೆಯಾಗಲಿವೆ ಎಂದು ಅಭಿಪ್ರಾಯಪಟ್ಟರು. ಶಿಬಿರದಲ್ಲಿ ಭಾಗವಹಿಸಿರುವ ನುರಿತ ವೈದ್ಯರಿಂದ ಮಹಿಳೆಯರು ಸೂಕ್ತ ಸಲಹೆ, ಸೂಚನೆ ಹಾಗೂ ಚಿಕಿತ್ಸೆ ಯನ್ನು ಪಡೆದು ಕೊಳ್ಳಬೇಕು. ತಮ್ಮ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಜಿ.ಪ್ರಮೋದ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್. ಹೊಸಮನೆ, ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ರಾಘವೇಂದ್ರ ಗೌಡ ಬಿ.ಜಿ., ಪ್ರಿನ್ಸಿಪಲ್ ಕೌಟುಂಬಿಕ ನ್ಯಾಯಾಧೀಶರಾದ ವೆಂಕಟೇಶ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಇಬ್ರಾಹಿಂ ಎಂ.ಮುಜಾವರ್, ಒಂದನೇ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ನಸ್ರತ್ ಮುಖ್ತಾರ್ ಅಹ್ಮದ್ ಖಾನ್, ಪ್ರಿನ್ಸಿಪಲ್ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ನಾಗೇಶ್ ನಾಯ್ಕ, 1ನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಸಿದ್ದಲಿಂಗಯ್ಯ ಗಂಗಾಧರ ಮಠ, 3ನೇ ಅಪರ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಮುದುಕಪ್ಪ ಒಡನ್ ಇದ್ದರು.



ಕೇಂದ್ರದ ಪಿಂಚಣಿ ಪರಿಷ್ಕರಣೆ ನೀತಿ ಖಂಡಿಸಿ ನಿವೃತ್ತ ನೌಕರರಿಂದ ಪ್ರತಿಭಟನೆ

ಜೇವರ್ಗಿ,ಮಾ.29

ಕೇಂದ್ರ ಸರಕಾರದ ಪಿಂಚಣಿ ಪರಿಷ್ಕರಣೆ ನೀತಿ ಖಂಡಿಸಿ ಪಟ್ಟಣದಲ್ಲಿ ಅಖಿಲ ಭಾರತ ನಿವೃತ್ತ ನೌಕರರ ಫೆಡರೇಷನ್ ಹಾಗೂ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ಬುಧವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪಟ್ಟಣದ ನಿವೃತ್ತ ನೌಕರರ ಭವನದಿಂದ ತಹಶೀಲ್ದಾರ್ ಕಚೇರಿಯವರೆಗೂ ಮೆರವಣಿಗೆ ನಡೆಸಿದ ನಿವೃತ್ತ ನೌಕರರು ಎಡಗೈಗೆ ಕಪ್ಪು ಪಟ್ಟಿ ಧರಿಸಿ, ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿದರು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿವೃತ್ತ ನೌಕರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ನಿವೃತ್ತಿ ವೇತನ ಮತ್ತು ಪಿಂಚಣಿ ಪರಿಷ್ಕರಣೆ ಮಾಡಿ, ವಾರ್ಷಿಕವಾಗಿ ನೀಡುತ್ತಿದ್ದ 2 ತುಟ್ಟಿ ಭತ್ಯೆ ಕಡಿತ ಮಸೂದೆ ಮಂಡನೆ ಮಾಡಿದರು. ಜೊತೆಗೆ ಸಂಸತ್ತಿನಲ್ಲಿ ಕಾಯ್ದೆಗೆ ಒಪ್ಪಿಗೆ ಪಡೆದಿರುವುದು ಖಂಡನೀಯ ಎಂದು ಆಕ್ರೋಶ ಹೊರ ಹಾಕಿದರು.

ಈ ವೇಳೆ ನಿವೃತ್ತ ನೌಕರರ ಸಂಘದ ಗೌರವಾಧ್ಯಕ್ಷ ಚಂದಪ್ಪ, ಅಧ್ಯಕ್ಷ ಡಿ.ಬಿ.ಪಾಟೀಲ್, ಉಪಾಧ್ಯಕ್ಷ ಈರಯ್ಯ ಹಿರೇಮಠ, ಕಂಠಪ್ಪ ಹರವಾಳ, ಕಾರ್ಯದರ್ಶಿ ಮಲ್ಲಿಕಾರ್ಜುನ ಪಾಟೀಲ್, ಜಂಟಿ ಕಾರ್ಯದರ್ಶಿ ಬಸಯ್ಯ ಸ್ವಾಮಿ, ಬಸವರಾಜ ಹವಾಲ್ದಾರ ಬಳಬಟ್ಟಿ, ಸಿದ್ದಣ್ಣ ಚೂರಿ, ಮಹಮ್ಮದ್ ಮಶಾಕಸಾಬ ರಾವೂರಕರ್, ತಿಪ್ಪಣ್ಣ ದೊಡ್ಮನಿ, ರಾಮಣ್ಣ ಹೂಗಾರ, ಅಶೋಕ್ ಸನಗುಂದಿ, ಕರೀಮಸಾಬ ಕೂಡಿ, ರಾಜಶೇಖರ ಧನರೆಡ್ಡಿ, ಟಿ.ಬಿ.ಲಮಾಣಿ, ಎಸ್.ಎಸ್. ಮಾಲಿ ಬಿರಾದಾರ, ಕರಬಸಪ್ಪ ಯಲಗೋಡ, ಸಿದ್ದಣ್ಣ ಅಟ್ಟದಮನಿ ಉಪಸ್ಥಿತರಿದ್ದರು.

ಆಶಾ ಕಾರ್ಯಕರ್ತೆಯರನ್ನು ವಜಾಗೊಳಿಸದಂತೆ ಸಚಿವ ಪ್ರಿಯಾಂಕ್ ಖರ್ಗೆಗೆ ಮನವಿ

ಕಲಬುರಗಿ,ಮಾ.29

ಜಿಲ್ಲೆಯಲ್ಲಿ 200ಕ್ಕೂ ಅಧಿಕ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆಯಲು ಆರೋಗ್ಯ ಇಲಾಖೆ ರೂಪಿಸಿರುವ ನೀಲಿ ನಕ್ಷೆಯನ್ನು ವಿರೋಧಿಸಿ, ಯಾವುದೇ ಆಶಾ ಕಾರ್ಯಕರ್ತೆಯನ್ನು ವಜಾ ಗೊಳಿಸಬಾರದು ಎಂದು ಒತ್ತಾಯಿಸಿ ಸಂಘಟನೆ ವತಿಯಿಂದ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಬೆಂಗಳೂರಿನ ಗೃಹ ಕಚೇರಿಯಲ್ಲಿ ಭೇಟಿಯಾಗಿ ಮನವಿ ಸಲ್ಲಿಸಲಾಯಿತು.



ಆರೋಗ್ಯ ಇಲಾಖೆಯ ಈ ಕ್ರಮದಿಂದ ನೂರಾರು ಆಶಾ ಕಾರ್ಯಕರ್ತೆಯರ ಬದುಕು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದ್ದು, ತಕ್ಷಣವೇ ಈ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಮನವಿಯಲ್ಲಿ ಸಂಘಟನೆಯ ಮುಖಂಡರು ಒತ್ತಾಯಿಸಿದ್ದಾರೆ.

ನಿಯೋಗದಲ್ಲಿ ಕಾರ್ಮಿಕ ಸಂಘಟನೆಯ ಕಲಬುರಗಿ ಜಿಲ್ಲಾ ಕಾರ್ಯದರ್ಶಿ ಎಸ್.ಎಂ. ಶರ್ಮಾ, ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಅಧ್ಯಕ್ಷೆ ಶಿವಲಿಂಗಮ್ಮ ಹರಳಯ್ಯ, ಜಿಲ್ಲಾ ಕಾರ್ಯದರ್ಶಿ ಗೀತಾ ಬಡಿಗೇರ್ ಹಾಗೂ ಆಶಾ ಕಾರ್ಯಕರ್ತೆಯರಾದ ಸಂಗೀತಾ ಮತ್ತು ಯಲ್ಲಮ್ಮ ಭಾಗವಹಿಸಿದ್ದರು.

ಆಶಾ ಕಾರ್ಯಕರ್ತೆಯರು ಆರೋಗ್ಯ ಸೇವೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಅವರನ್ನು ವಜಾಗೊಳಿಸುವುದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆಯೂ ದುಷ್ಪರಿಣಾಮ ಬೀರುತ್ತದೆ ಎಂದು ಪ್ರತಿನಿಧಿಗಳು ಆತಂಕ ವ್ಯಕ್ತಪಡಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಕ್ರಿಕೆಟ್ ಟಿಕೆಟ್‌ಗಾಗಿ ದುಂಬಾಲು ಬಿದ್ದ ಶಾಸಕರ ಕೃತ್ಯ ನಾಚಿಕೆಗೇಡು!



ಶಾಸಕರು ತಮ್ಮ ಕುಟುಂಬದೊಂದಿಗೆ ಪಂದ್ಯ ವೀಕ್ಷಿಸಲು ಬಯಸುವುದು ತಪ್ಪಲ್ಲ; ಆದರೆ, ಅದಕ್ಕಾಗಿ ಅಧಿವೇಶನದಲ್ಲಿ ಒತ್ತಾಯಿಸುವುದು ಮತ್ತು ಸರ್ಕಾರಿ ಯಂತ್ರವನ್ನು ಬಳಸುವುದು ತಪ್ಪು. ಅಧಿಕಾರ ಜನಸೇವೆಗೆ ಬಳಕೆಯಾಗಬೇಕೇ ಹೊರತು, ವಿಐಪಿ ವಿನೋದಕ್ಕಲ್ಲ.

ರಾಜ್ಯ ವಿಧಾನಮಂಡಲದಲ್ಲಿ ಇತ್ತೀಚೆಗೆ ಭಾರೀ ಚರ್ಚೆಯೊಂದು ನಡೆಯಿತು. ಅದು ಜನರಿಗಾಗಿ, ಜನಪರ ಯೋಜನೆಗಳಿಗಾಗಿ, ಅಭಿವೃದ್ಧಿ ಕಾರ್ಯಗಳಿಗಾಗಿ, ನಾಡಿನ ಒಳಿತಿಗಾಗಿ ನಡೆದ ಚರ್ಚೆಯಲ್ಲ. ಬದಲಿಗೆ, ಶನಿವಾರ (ಮಾರ್ಚ್ 28) ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಆರ್‌ಸಿಬಿ ಮತ್ತು ಎಸ್‌ಆರ್‌ಎಚ್ ನಡುವಿನ ಐಪಿಎಲ್ ಮೊದಲ ಪಂದ್ಯದ ವೀಕ್ಷಣೆಗೆ ವಿಐಪಿ ಟಿಕೆಟ್‌ಗಾಗಿ ನಡೆದ ಚರ್ಚೆಯಾಗಿತ್ತು.

ನಾವು ವಿಐಪಿಗಳು. ನಾವು ಸಾಮಾನ್ಯ ಜನರಂತೆ ಕ್ಯೂನಲ್ಲಿ ನಿಲ್ಲಲು ಸಾಧ್ಯವಿಲ್ಲ. ಎಲ್ಲೆಲ್ಲೋ ಜಾಗ ಕೊಟ್ಟರೆ, ಅಲ್ಲೆಲ್ಲ ಹೋಗಿ ಕೂರಕ್ಕಾಗಲ್ಲ. ಪ್ರತಿಯೊಬ್ಬ ಶಾಸಕರಿಗೂ ತಲಾ 4 ವಿಐಪಿ ಟಿಕೆಟ್ ಕೊಡಿಸಬೇಕು ಎಂಬುದು ಶಾಸಕರ ವಾದವಾಗಿತ್ತು. ತಾವು ಮಾತ್ರವಲ್ಲದೆ, ತಮ್ಮ ಕುಟುಂಬದವರೂ ವಿಐಪಿ ಗ್ಯಾಲರಿಯಲ್ಲಿ ಉಚಿತವಾಗಿ ಕುಳಿತು ಟಿಕೆಟ್ ನೀಡಬೇಕೆಂಬುದು ಶಾಸಕರ ಒತ್ತಾಯವಾಗಿತ್ತು.

ಕಾಂಗ್ರೆಸ್ ಶಾಸಕ ವಿಜಯಾನಂದ ಕಾಶಪ್ಪನವರ್ ವಿಧಾನಮಂಡಲದಲ್ಲಿ ಎತ್ತಿದ ಈ ಬೇಡಿಕೆಗೆ ಆಡಳಿತ ಪಕ್ಷ ವಿಪಕ್ಷವೆನ್ನದೆ ಎಲ್ಲ ಪಕ್ಷಗಳ ಶಾಸಕರು ಸಹಮತ ವ್ಯಕ್ತಪಡಿಸಿದರು. ಟಿಕೆಟ್‌ಗಾಗಿ ಒಗ್ಗಟ್ಟು ಪ್ರದರ್ಶಿಸಿದರು. ಬಹುಶಃ, ಇದೊಂದು ಮಸೂದೆ ಏನಾದರೂ ಆಗಿದ್ದರೆ, ಯಾವುದೇ ಚರ್ಚೆಗಳೇ ಇಲ್ಲದೆ ಸರ್ವಾನುಮತದಿಂದ ಅಂಗೀಕಾರಗೊಂಡ ಮಸೂದೆಯೂ ಆಗಿಬಿಡುತ್ತಿತ್ತು. ಆದರೆ, ಇದು ಮಸೂದೆಯಾಗಿರಲಿಲ್ಲ.

ಯಾರು ಏನಂದಾರು ಎಂಬ ಸಣ್ಣ ಅಳುಕು ಇಲ್ಲದೆ, ಸ್ವಾರ್ಥಕ್ಕಾಗಿ ಸದನದಲ್ಲಿ ಇಟ್ಟ ಶಾಸಕರ ವಿಐಪಿ ಟಿಕೆಟ್ ಬೇಡಿಕೆಯನ್ನು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಸಮ್ಮತಿಸಿದರು. ಪ್ರತಿಯೊಬ್ಬರಿಗೂ ತಲಾ 4 ಟಿಕೆಟ್ ನೀಡುವಂತೆ ಸರ್ಕಾರಕ್ಕೆ ಸೂಚನೆಯನ್ನೂ ನೀಡಿದರು. ಇಂದು (ಶನಿವಾರ) ನಡೆಯಲಿರುವ ಐಪಿಎಲ್ ಆಟವನ್ನು ಶಾಸಕರು ತಮ್ಮ ಸಕುಟುಂಬ ಸಮೇತ ಸ್ಟೇಡಿಯಂನಲ್ಲಿ ಕುಳಿತು ವೀಕ್ಷಿಸಲಿದ್ದಾರೆ. ಕೊಹ್ಲಿ, ರಜತ್ ಪಾಟಿದಾರ್, ಭುವನೇಶ್ವರ್ ಕುಮಾರ್, ಕೃನಾಲ್ ಪಾಂಡ್ಯರ ಆಟಕ್ಕೆ ಕೇಕೆ ಹಾಕಲಿದ್ದಾರೆ. ಬಹುಶಃ ಈ ಶಾಸಕರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸೇರಿಕೊಳ್ಳಬಹುದು.

ಈ ಸರ್ಕಾರಕ್ಕೆ ಎಳ್ಳಷ್ಟು ನಾಚಿಕೆ-ಅಂಜಿಕೆ ಇಲ್ಲ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಕಳೆದ ವರ್ಷವಷ್ಟೇ ಇದೇ ಐಪಿಎಲ್ ವಿಜಯೋತ್ಸವದ ಕಾರಣಕ್ಕಾಗಿ, ತಮ್ಮ ಕಣ್ಣೆದುರೇ 11 ಮಂದಿ ಜೀವ ತೆತ್ತಿದ್ದರು. ಐಪಿಎಲ್‌ನಲ್ಲಿ ಆರ್‌ಸಿಬಿ ಮೊದಲ ಬಾರಿಗೆ ಗೆದ್ದಿದ್ದಕ್ಕಾಗಿ ತಂಡವು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭ್ರಮಾಚರಣೆ ಆಯೋಜಿಸಿತ್ತು. ತಾವೇನು ಕಮ್ಮಿ ಎಂಬಂತೆ ಪ್ರಚಾರದ ಗೀಳಿಗೆ ಬಿದ್ದ ಸರ್ಕಾರ ಕೂಡ, ವಿಧಾನಸೌಧದ ಮುಖ್ಯದ್ವಾರದಲ್ಲಿ ತಂಡವನ್ನು ಸನ್ಮಾನಿಸಲು ಕಾರ್ಯಕ್ರಮ ಹಮ್ಮಿಕೊಂಡಿತ್ತು. ಎರಡೂ ಕಾರ್ಯಕ್ರಮಗಳಿಗೆ ಸಾವಿರಾರು ಸಂಖ್ಯೆಯ ಅಭಿಮಾನಿಗಳು ನೆರೆದಿದ್ದರು. ಸ್ಟೇಡಿಯಂ ಪ್ರವೇಶಿಸುವಾಗ ನೂಕು-ನುಗ್ಗಲು ಉಂಟಾಗಿ, ಕಾಲ್ತುಳಿತದಲ್ಲಿ 11 ಮಂದಿ ಅಮಾಯಕರು ಅಸುನೀಗಿದರು. ನೂರಾರು ಮಂದಿ ಗಾಯಗೊಂಡರು.

ಸರ್ಕಾರ ಮತ್ತು ಕ್ರಿಕೆಟ್ ತಂಡ ಎರಡೂ ತೋರಿದ ನಿರ್ಲಕ್ಷ್ಯದಿಂದ 11 ಕುಟುಂಬಗಳು ತಮ್ಮ ಭವಿಷ್ಯವನ್ನೇ ಕಳೆದುಕೊಂಡವು. ಈ ಕಹಿ ಘಟನೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಅದಿನ್ನೂ ಮರೆಯಾಗುವ ಮೊದಲೇ, ಸಂವೇದನಾಶೂನ್ಯ ಶಾಸಕರು ಅದೇ ಕ್ರಿಕೆಟ್ ಪಂದ್ಯ ವೀಕ್ಷಿಸಲು ವಿಐಟಿ ಟಿಕೆಟ್‌ಗಳಿಗಾಗಿ ಅಧಿವೇಶನದಲ್ಲಿ ಪಟ್ಟು ಹಿಡಿದಿದ್ದಾರೆ. ಅಧಿವೇಶನದ ಘನತೆ-ಗೌರವಕ್ಕೂ ಅಪಕೀರ್ತಿ ತಂದಿದ್ದಾರೆ. ಈ ಅಧಿಕಾರಸ್ಥರ ಕತೆ ಹೀಗಾದರೆ, ಕ್ರಿಕೆಟ್ ಆಟಗಾರರು ಕೂಡ ಅವಿವೇಕಿಗಳಂತೆ ವರ್ತಿಸಿದ್ದರು. ಕಾಲ್ತುಳಿತದ ಕಾರಣಕ್ಕಾಗಿ ದಾಖಲಾದ ತಮ್ಮ ವಿರುದ್ಧದ ಎಫ್‌ಐಆರ್‌ಗಳನ್ನು ರದ್ದುಗೊಳಿಸದೆ, ಬೆಂಗಳೂರಿನಲ್ಲಿ ಕ್ರಿಕೆಟ್ ಪಂದ್ಯ ಆಡುವುದಿಲ್ಲವೆಂದು ಆರ್‌ಸಿಬಿ ಆಟಗಾರರು ಹಠಕ್ಕೆ ಬಿದ್ದಿದ್ದರು.

ಅಂದಹಾಗೆ, ವಿಧಾನಮಂಡಲದ ಅಧಿವೇಶನಗಳು ಪ್ರಜಾಪ್ರಭುತ್ವದ ಜೀವನಾಡಿಗಳು. ಇವುಗಳಿರುವುದು ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಕುರಿತು ಆರೋಗ್ಯಕರವಾಗಿ ಚರ್ಚಿಸಲು. ರಾಜ್ಯದ ಆಡಳಿತ, ಕಾನೂನು ರಚನೆ ಹಾಗೂ ಸರ್ಕಾರದ ಕಾರ್ಯನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು. ಜನಪರ ನೀತಿಗಳನ್ನು ರೂಪಿಸಲು.

ಕಳೆದ ವಾರ ಮುಗಿದ ಅಧಿವೇಶನ, ಅದೂ ಬಜೆಟ್ ಅಧಿವೇಶನದಲ್ಲಿ ಗಂಭೀರ ವಿಚಾರಗಳು ಚರ್ಚೆಯಾಗಬೇಕಿತ್ತು. ಆದರೆ, ಅಂತಹ ಯಾವುದೇ ಚರ್ಚೆಗಳು ಈ ಬಾರಿಯ ಸದನದಲ್ಲಿ ಕಾಣಲಿಲ್ಲ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಇಂಧನ ಮತ್ತು ಎಲ್‌ಪಿಜಿ ಬಿಕ್ಕಟ್ಟು ಎದುರಾಗಿದೆ. ರಾಜ್ಯದ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ತೀವ್ರ ಸಂಕಷ್ಟದಲ್ಲಿವೆ. ಗೃಹ ಬಳಕೆಯ ಸಿಲಿಂಡರ್‌ಗಳು ಅಗತ್ಯಕ್ಕೆ ತಕ್ಕಂತೆ ದೊರೆಯುತ್ತಿಲ್ಲ. ಹಲವರು ಸೌದೆ ಒಲೆಗಳ ಮೊರೆ ಹೋಗುತ್ತಿದ್ದಾರೆ. ಮತ್ತೊಂದೆಡೆ, 12 ರಾಜ್ಯಗಳನ್ನು ಕಾಡಿರುವ ಮತದಾರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ () ಎಂಬ ಪೆಡಂಭೂತ ರಾಜ್ಯದ ಮನೆ ಬಾಗಿಲಿಗೆ ಬಂದು ನಿಂತಿದೆ. ಮತಪಟ್ಟಿಯಿಂದ ಹೆಸರು ಕಳೆದುಕೊಳ್ಳುವ ಆತಂಕ ಪ್ರತಿ ಮನೆ ಮಂದಿಯನ್ನೂ ಕಾಡುತ್ತಿದೆ. ಬೆಲೆ ಏರಿಕೆ, ನಿರುದ್ಯೋಗದಂತಹ ಸಮಸ್ಯೆಗಳು ಜನರು ಬಸವಳಿಯುವಂತೆ ಮಾಡಿವೆ.

ಇಂತಹ ನಾನಾ ಸಮಸ್ಯೆ-ಸವಾಲು-ಬಿಕ್ಕಟ್ಟುಗಳು ಎದುರಾಗಿರುವ ಸಂದರ್ಭದಲ್ಲಿ, ಜನಸಾಮನ್ಯರ ಕಷ್ಟ-ನಷ್ಟಗಳ ಕುರಿತು ಚರ್ಚಿಸಬೇಕಿದ್ದ ಅಧಿವೇಶನದಲ್ಲಿ ಶಾಸಕರ ಸ್ವ-ಹಿತಾಸಕ್ತಿಗಳು ಚರ್ಚೆಯಾಗಿವೆ. ಜನಪ್ರತಿನಿಧಿಗಳು ಎನ್ನಿಸಿಕೊಂಡವರು ಕ್ರಿಕೆಟ್ ಪಂದ್ಯದ ಟಿಕೆಟ್‌ಗಳಿಗಾಗಿ, ವಿಐಪಿ ಸ್ಥಾನಮಾನ ಟ್ರೀಟ್‌ಮೆಂಟ್‌ಗಾಗಿ ಹಾತೊರೆದಿದ್ದಾರೆ.

ಈ ವಿಐಪಿ ಸಂಸ್ಕೃತಿ ಭಾರತೀಯ ರಾಜಕೀಯದಲ್ಲಿ ಬಹುಕಾಲದಿಂದಲೂ ಟೀಕೆಗೆ ಒಳಗಾಗಿದೆ. ಶಾಸಕರು ನಾವು ವಿಐಪಿಗಳು ಎಂದು ಹೇಳುವಾಗ ಅವರು ತಾವು ಜನರಿಂದ ಆಯ್ಕೆಯಾದವರು ಎಂಬುದನ್ನು ಮರೆಯುತ್ತಿದ್ದಾರೆ. ತಮ್ಮ ಅಧಿಕಾರವು ಜನರ ಸೇವೆಗಾಗಿಯೇ ಹೊರತು ವೈಯಕ್ತಿಕ ಸುಖಕ್ಕಾಗಿ ಅಲ್ಲ ಎಂಬುದನ್ನು ಮರೆಮಾಚುತ್ತಿದ್ದಾರೆ. ಕುಟುಂಬಸಮೇತ ಐಪಿಎಲ್ ಪಂದ್ಯವೊಂದನ್ನು ವೀಕ್ಷಿಸಲು ಸರ್ಕಾರದಿಂದ ಸೌಲಭ್ಯ ಕೇಳುತ್ತಿದ್ದಾರೆ. ಕರ್ನಾಟಕದ ಘನತೆವೆತ್ತ ರಾಜಕಾರಣದ ಮಾನವನ್ನು ಕಳೆಯುತ್ತಿದ್ದಾರೆ.

ಶಾಸಕರು ತಮ್ಮ ಕುಟುಂಬದೊಂದಿಗೆ ಪಂದ್ಯ ವೀಕ್ಷಿಸಲು ಬಯಸುವುದು ತಪ್ಪಲ್ಲ; ಆದರೆ, ಅದಕ್ಕಾಗಿ ಅಧಿವೇಶನದಲ್ಲಿ ಒತ್ತಾಯಿಸುವುದು ಮತ್ತು ಸರ್ಕಾರಿ ಯಂತ್ರವನ್ನು ಬಳಸುವುದು ತಪ್ಪು. ಅಧಿಕಾರ ಜನಸೇವೆಗೆ ಬಳಕೆಯಾಗಬೇಕೇ ಹೊರತು, ವಿಐಪಿ ವಿನೋದಕ್ಕಲ್ಲ.

ನಾನೇ ರಾಮ, ನಾನೇ ಶಿವ ಎಂದು ಮಾಡಿದ್ದು ಅತ್ಯಾಚಾರ! ಸ್ವಯಂಘೋಷಿತ ದೇವಮಾನವರ ಬಣ್ಣ ಬಯಲು

ಮಹಾರಾಷ್ಟ್ರದಲ್ಲಿ ತಾನು ಶಿವನ ಅವತಾರ ಎಂದು ಹೇಳಿಕೊಂಡ ನಕಲಿ ದೇವಮಾನವ ಬಾಬಾ ಹೃಷಿಕೇಶ್ ವೈದ್ಯ ಎಂಬಾತನನ್ನು ಅತ್ಯಾಚಾರ ಪ್ರಕರಣದಲ್ಲಿ ಬಂಧಿಸಲಾಗಿದೆ. ಕಳೆದ ವಾರ ಮಾಜಿ ಮರ್ಚಂಟ್ ನೇವಿ ಅಧಿಕಾರಿ ಅಶೋಕ್ ಖರಾತ್‌ನನ್ನು ಬಂಧಿಸಲಾಗಿದೆ. ದೇಶದಲ್ಲಿ ಇಂತಹ ಹಲವರು ಆಧ್ಯಾತ್ಮ, ದೇವರ ಹೆಸರಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ.

ದೇವರು, ಧರ್ಮ, ಆಧ್ಯಾತ್ಮದ ಹೆಸರಿನಲ್ಲಿ ಈ ದೇಶದಲ್ಲಿ ನಡೆದ, ನಡೆಯುತ್ತಿರುವ ಅನಾಚಾರಗಳಿಗೆ ಲೆಕ್ಕವೇ ಇಲ್ಲ. ಮಠಗಳನ್ನು ಕಟ್ಟಿ ಲೋಕೋದ್ಧಾರ ಮಾಡುವ ವೇಷ ತೊಟ್ಟ ಬ್ರಹ್ಮಚರ್ಯದ ಸೋಗಿನಲ್ಲಿರುವ ನಕಲಿ ದೇವಮಾನವರು ಎಸಗಿದ ಅತ್ಯಾಚಾರಗಳ ಸಾಲು ಸಾಲು ಪ್ರಕರಣಗಳು ಬೆಳಕಿಗೆ ಬಂದು ಹಾಗೇ ಇತಿಹಾಸದ ಹಾಳೆ ಸೇರಿವೆ.

ಒಂದೇ ವಾರದಲ್ಲಿ ಮಹಾರಾಷ್ಟ್ರದಲ್ಲಿ ಎರಡು ಪ್ರಕರಣ ವರದಿಯಾಗಿದೆ. ನಿನ್ನೆ ಮಹಾರಾಷ್ಟ್ರದಲ್ಲೊಬ್ಬ ಬಾಬಾ ತಾನು ಶಿವನ ಅವತಾರ ಎಂದು ಹೇಳಿಕೊಂಡು ಹೀನ ಕೃತ್ಯದಲ್ಲಿ ತೊಡಗಿಕೊಂಡಿದ್ದ. ಹೃಷಿಕೇಶ್ ವೈದ್ಯ ಎಂಬ ಸ್ವಯಂಘೋಷಿತ ದೇವಮಾನವ ''ನಾನು ಶಿವನ ಅವತಾರ, ನೀನು ನನ್ನ ಪಾರ್ವತಿ'' ಎಂದು ಹೇಳಿಕೊಂಡು 35 ವರ್ಷದ ಮಹಿಳೆಯ ಮೇಲೆ ನಿರಂತರ ಅತ್ಯಾಚಾರ ಎಸಗಿದ್ದಾನೆ.

ಸಂತ್ರಸ್ತ ದೂರುದಾರೆಯು ಮಾಣಿಕ್‌ಪುರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪ್ರಕರಣವನ್ನು ಆ ನಂತರ ಮಂಜರಿ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ. ''ತಾನು ಸಾಕ್ಷಾತ್ ಶಿವನ ಅವತಾರ, ನೀನು ನನ್ನ ಪಾರ್ವತಿ'' ಎಂದು ನಂಬಿಸಿ ಹೋಟೆಲ್‌ಗೆ ಕರೆದುಕೊಂಡು ಹೋಗಿ ಅತ್ಯಾಚಾರ ನಡೆಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಇಂದು ಆಥನ ಬಂಧನವಾಗಿದೆ.

ಆಧ್ಯಾತ್ಮಿಕ ಬೋಧನೆಗಳ ಮೂಲಕ ಮಹಿಳೆಗೆ ಹತ್ತಿರವಾದ ಈತ 2023ರಲ್ಲಿ ಮಹಿಳೆಯನ್ನು ಪುಣೆಯ ಮಂಜರಿ ಪ್ರದೇಶದ ಲಾಡ್ಜ್‌ಗೆ ಕರೆದುಕೊಂಡು ಹೋಗಿ ಮೊದಲ ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದು, ಈ ಸಮಯದಲ್ಲಿ ತೆಗೆದ ಫೋಟೋಗಳನ್ನು ಉಪಯೋಗಿಸಿಕೊಂಡು ನಿರಂತರ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಬಳಿಕ 2025 ರಲ್ಲಿ ವಸೈನಲ್ಲಿರುವ ಲಾಡ್ಜ್‌ಗೆ ಕರೆದೊಯ್ದು ಅತ್ಯಾಚಾರ ಮಾಡಿದ್ದಾನೆ ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ನೌಕಾಪಡೆಯ ಮಾಜಿ ಅಧಿಕಾರಿ ಅಶೋಕ್ ಖರಾತ್ ಪ್ರಕರಣ: ಮಾಜಿ ಮರ್ಚಂಟ್ ನೇವಿ ಅಧಿಕಾರಿ ಅಶೋಕ್ ಖರಾತ್ ತಾನು ದೇವಮಾನವ ಎಂದು ಘೋಷಿಸಿಕೊಂಡು ಹಲವಾರು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ್ದ. 55 ಕ್ಕೂ ಹೆಚ್ಚು ಅಸಭ್ಯ ವಿಡಿಯೊಗಳು ಈತನ ಬಳಿ ಇದ್ದವು. ಶಿರಡಿಯ ಯುವತಿಗೆ ಆಕೆಯ ಪೋಷಕರನ್ನು ಕೊಲ್ಲುವುದಾಗಿ ಬೆದರಿಸಿ ಪದೇ ಪದೇ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಇದೇ ಮಾರ್ಚ್ 18ರಂದು ಮಹಾರಾಷ್ಟ್ರ ಪೊಲೀಸರು ಈ ಡೋಂಗಿ ಬಾಬನನ್ನು ಬಂಧಿಸಿದ್ದಾರೆ.

ತನ್ನ ದೈವಿಕ ಶಕ್ತಿಗಳನ್ನು ಬಳಸಿಕೊಂಡು ಯುವತಿಯ ತಂದೆ ತಾಯಿಯನ್ನು ಕೊಲ್ಲುವುದಾಗಿ ಹೆದರಿಸಿದ ಬಾಬ ಖತಾರ್ ಜುಲೈ ಮತ್ತು ಡಿಸೆಂಬರ್‌ನಲ್ಲಿ ಹಲವಾರು ಬಾರಿ ತನ್ನ ಮೇಲೆ ದೌರ್ಜನ್ಯ ಎಸಗಿದ್ದಾನೆ ಎಂದು ಯುವತಿ ಆರೋಪಿಸಿದ್ದಾರೆ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅಶೋಕ್ ಖರಾತ್ ಬಗ್ಗೆ ವಿಧಾನಸಭಾ ಅಧಿವೇಶನದಲ್ಲಿ ಹೇಳಿಕೆ ನೀಡಿದ್ದರು. ಅತ್ಯಾಚಾರಿ ಬಾಬನ ಸಂಪೂರ್ಣ ಹಿನ್ನೆಲೆ ಹಾಗೂ ಆಸ್ತಿ ವಿವರಗಳನ್ನು ಬಹಿರಂಗಗೊಳಿಸಿದ್ದರು. ಭಾರತದಲ್ಲಿ ಇಂತಹ ದೇವಮಾನವರು ನಡೆಸಿದ ಪೈಶಾಚಿಕ ಕೃತ್ಯಗಳ ಪಟ್ಟಿ ಬಹಳ ದೊಡ್ಡದಿದೆ

ಆಸಾರಾಮ್ ಬಾಪು ಎಂಬ ಕಳ್ಳ ಬಾಬ: ಭಾರತ ಅಷ್ಟೇ ಅಲ್ಲ ಜಗತ್ತಿನ ಹಲವೆಡೆ ಪ್ರಚಾರ ಪಡೆದಿದ್ದ, ಪ್ರಪಂಚದ ಹಲವೆಡೆ 400 ಆಶ್ರಮಗಳನ್ನು ತೆರೆದಿದ್ದ ಈತ ಯೋಗ ಮತ್ತು ಧ್ಯಾನ ತರಗತಿಗಳನ್ನು ನಡೆಸುತ್ತಿದ್ದನಂತೆ. 2013ರಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಸಾಬೀತಾದ ನಂತರ ಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿತ್ತು.

77 ವರ್ಷದ ಮುದುಕ ಆಸಾರಾಮ್ ಬಾಪು ಜೋಧ್‌ಪುರದ 16 ವರ್ಷದ ಅಪ್ರಾಪ್ತೆಯ ಮೇಲೆ ಅತ್ಯಾಚಾರ ಮಾಡಿದ್ದ. ಈತನ ಮೇಲೆ ಇನ್ನಿತರ ಅತ್ಯಾಚಾರ ಪ್ರಕರಣಗಳು ಕೇಳಿ ಬಂದವು. ಆ



ಸಮಯದಲ್ಲಿ ಅಪಾರ ಭಕ್ತ ಅನುಯಾಯಿಗಳನ್ನು ಹೊಂದಿದ್ದರಿಂದ ಜೋಧ್‌ಪುರದಲ್ಲಿ ಹಿಂಸಾಚಾರ ನಡೆವ ಭೀತಿ ಮನೆ ಮಾಡಿತ್ತು. ಬಿಬಿಸಿ ವರದಿಯ ಪ್ರಕಾರ ಅಂದು ಜೋಧ್‌ಪುರ ಸುತ್ತಮುತ್ತ ಯಾವುದೇ ಹಿಂಸೆಗಳು ಈ ಭಕ್ತರಿಂದ ನಡೆಯದಂತೆ ತಡೆಯಲು ಕಠಿಣ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಬಾಬಾನ ಸಹಚರರಿಗೂ 20 ವರ್ಷದ ಸಜೆ ವಿಧಿಸಿತ್ತು ಕೋರ್ಟ್.

2002 ಹಾಗೂ 2004ರ ಅವಧಿಯಲ್ಲಿ ಗುಜರಾತ್‌ನ ಸೂರತ್ ಮಹಿಳೆಯಿಂದ ಬಾಪು ಮೇಲೆ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. ಈತ ಎಷ್ಟು ಪ್ರಭಾವಶಾಲಿಯಾಗಿದ್ದ ಎಂಬುದಕ್ಕೆ ಸಾಕ್ಷಿ ಈತನ ಭಕ್ತವೃಂದ. ಡೆಬ್‌ಸೈಟ್‌ನಲ್ಲಿ 40 ಮಿಲಿಯನ್ ಹಿಂಬಾಲಕರನ್ನು ಹೊಂದಿದ್ದ ಆಸಾರಾಮ್ ಬಾಪು, ಕೋಟ್ಯಂತರ ರೂಪಾಯಿ ಬೆಲೆಬಾಳುವ ಆಸ್ತಿ ಪಾಸ್ತಿ ಹೊಂದಿದ್ದ. ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಈತನ ಕಾರ್ಯಕ್ರಮವೊಂದರಲ್ಲಿ ಕಾಣಿಸಿಕೊಂಡಿದ್ದರು. ಈತ ಸಾಮಾನ್ಯ ಸ್ವಾಮೀಜಿಯಾಗಿರಲಿಲ್ಲ, ತನ್ನ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದವರ ಮೇಲೆ ರೊಚ್ಚಿಗೆದ್ದ ಈತ ಎರಡು ಪ್ರಕರಣಗಳ ಒಟ್ಟು 9 ಸಾಕ್ಷಿಗಳ ಮೇಲೆ ಹಲ್ಲೆ ನಡೆಸಿದ್ದ. ಮೂವರ ಜೀವ ತೆಗೆದಿದ್ದ.

ಗುರ್ಮಿತ್ ರಾಮ್ ರಹೀಂ ಸಿಂಗ್ ಪ್ರಕರಣ: ಪಂಜಾಬ್ ಹರಿಯಾಣದಲ್ಲಿ ನಡೆದ ಜನ ಮರುಳೋ ಜಾತ್ರೆ ಮರುಳೋ ಎಂಬ ಗಾದೆಗೆ ತಕ್ಕುದಾದ ಪ್ರಕರಣ ಇದು. 2002 ರಲ್ಲಿ ಅನಾಮಧೇಯ ಯುವತಿಯೊಬ್ಬಳು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಗೆ ಪತ್ರ ಬರೆಯುತ್ತಾಳೆ. ಆಕೆ ಈ ಗುರು ರಾಮ್ ರಹೀಂ ಸಿಂಗ್‌ನ ಅನುಯಾಯಿ, ಆತನಿಂದ ಅತ್ಯಾಚಾರಕ್ಕೆ ಒಳಗಾಗಿ ದೂರು ನೀಡಿದ ಮೊದಲ ಪ್ರಕರಣ ಇದಾಗಿತ್ತು.

ಮಹಾರಾಜ್ ನನ್ನನ್ನು ತನ್ನ ಆಶ್ರಮದ ಕೋಣೆಗೆ ಕರೆದೊಯ್ದ, ಆತ ತನ್ನನ್ನು ಮನಸಾರೆ ಪ್ರೀತಿಸುತ್ತಿರುವುದಾಗಿ ಹೇಳಿದ. ತನ್ನನ್ನು ಪ್ರಣಯಿಸುವುದಾಗಿ ಹೇಳಿಕೊಂಡ, ತನ್ನ ಸೇವಕಿಯಾಗು ಎಂದು ಕೇಳಿಕೊಂಡ ಗುರುವಿಗೆ ತಾನು ತನ್ನ ತನು ಮನ ಧನವನ್ನು ಅರ್ಪಿಸಿದ್ದೆ. ನಿರಾಕರಿಸುವ ಮಾತನಾಡಿದರೆ ಆತ ''ನಾನು ದೇವರು. ನಿನ್ನನ್ನು ಕೊಲ್ಲುತ್ತೇನೆ'' ಎಂದು ಹೆದರಿಸಿದ. ಹೀಗೆ ಹೆದರಿಸಿ ನಿರಂತರವಾಗಿ ಈ ದೇವಮಾನವ ಯುವತಿಯ ಮೇಲೆ ಅತ್ಯಾಚಾರ ಎಸಗಿದ್ದನು.

ಆಕೆ ಬರೆದ ಪತ್ರ ಆಧರಿಸಿ ಸರ್ಕಾರ ನಡೆಸಿದ ತನಿಖೆಯಿಂದ ಇಂತಹ 40ರಿಂದ 50 ಪ್ರಕರಣಗಳು ಬೆಳಕಿಗೆ ಬಂದವು. ಸಿಬಿಐ ಪ್ರಕರಣ ಕೈಗೆತ್ತಿಕೊಂಡ ಮೇಲೂ ನ್ಯಾಯ ಸಿಗಲು 15 ವರ್ಷಗಳ ಸುಧೀರ್ಘ ಕಾಲ ಹಿಡಿಯಿತು. ಈ ಬಗ್ಗೆ ಸ್ಥಳೀಯ ಹರಿಯಾಣಿ ಪತ್ರಿಕೆಯಲ್ಲಿ ವರದಿ ಬರೆದ ರಾಮ್‌ಚಂದರ್ ಛತ್ರಪತಿ ಅವರ ಕೊಲೆ ಮಾಡಿಸಿದ್ದ. ಈತ ಎಷ್ಟು ನೀಚ ಕೊಲೆಗಡುಕ ಬಾಬ ಎಂಬುದಕ್ಕೆ ಇದೇ ಸಾಕ್ಷಿ. ಪೂರಾ ಸಚ್ ಎಂಬ ಪತ್ರಿಕೆಯು ''ಸ್ವಾಮಿಯ ಅನೈತಿಕ ಕೃತ್ಯಗಳನ್ನು ಬಯಲಿಗೆಳೆದಿದ್ದಕ್ಕೆ ಪತ್ರಕರ್ತ ರಾಮ್‌ಚಂದರ್ ಕೊಲೆ ಮಾಡಲಾಗಿದೆ'' ಎಂಬ ಆರೋಪ ಮಾಡಿತ್ತು.

2017ರಲ್ಲಿ ಪಂಜಾಬ್ ಹರಿಯಾಣ ಕೋರ್ಟ್ 20 ವರ್ಷ ಸೆರೆವಾಸ ಶಿಕ್ಷೆ ವಿಧಿಸಿತು. ಪತ್ರಕರ್ತ ರಾಮ್ ಚಂದರ್ ಛತ್ರಪತಿ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು.

ಇಂತಹ ಹೀನ ಕೃತ್ಯ ನಡೆಸಿದ ಈತ ಮನುಷ್ಯನಾಗಲು ಅನರ್ಹ! ಅಂಥದ್ದರಲ್ಲಿ ಈತನನ್ನು ದೇವರು ಎಂದು ಪೂಜಿಸುವ ಅನುಯಾಯಿಗಳು ಬೀದಿಗಿಳಿದು ಹಿಂಸಾಚಾರದಲ್ಲಿ ತೊಡಗಿದರು. ಇವರ ಹುಚ್ಚುತನದಿಂದ 38 ಜನರು ಪ್ರಾಣ ಕಳೆದುಕೊಂಡರು.

''ನಾನು ರಾಮ್‌ಸಿಂಗ್ ಜಿ, ಮಸ್ತಾನ್‌ಜಿ ಅವರ ಸಚ್ಚಾ ಸೌಧ ಭೂಮಿಗೆ ನಮಸ್ಕರಿಸುತ್ತೇನೆ'' ಪ್ರಧಾನಿ ಮೋದಿ ಅವರು ಅಕ್ಟೋಬರ್ 11, 2014 ರಂದು ಹರಿಯಾಣದ ಸಿರ್ಸಾದಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ ಮಾತುಗಳು. ಪ್ರಧಾನಿ ನರೇಂದ್ರ ಮೋದಿ ಗುರ್ಮಿತ್ ರಾಮ್ ರಹೀಂ ಸಿಂಗ್‌ನನ್ನು ಹಲವು ರ್‍ಯಾಲಿಗಳಲ್ಲಿ ಹಾಡಿ ಹೊಗಳಿದ್ದಾರೆ. ಅಷ್ಟೇ ಅಲ್ಲ ಅಂದಿನ ಹರಿಯಾಣದ ಮುಖ್ಯಮಂತ್ರಿಗೂ ಈ ದೇವಮಾನವನ ಜೊತೆಗೆ ನಂಟಿತ್ತು.

ಕರ್ನಾಟಕದ ರಾಘವೇಶ್ವರ ಭಾರತೀ ಪ್ರಕರಣ: ಶಿವಮೊಗ್ಗದ ಹೊಸನಗರದ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಪ್ರಕರಣ ಕರ್ನಾಟದಲ್ಲಿ ಅತಿ ಹೆಚ್ಚು ಸಂಚಲನ ಸೃಷ್ಟಿ ಮಾಡಿದ ಪ್ರಕರಣ. ಈತನ ಮೇಲೆ ಎರಡು ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದವು. ಮಠದ ರಾಮಕಥಾ ಗಾಯಕಿ ಪ್ರೇಮಲತಾ ದಿವಾಕರ್ ಅವರು, ಸ್ವಾಮೀಜಿ 2011 ಮತ್ತು 2014ರ ನಡುವೆ ತನ್ನ ಮೇಲೆ ಹಲವು ಬಾರಿ ಅತ್ಯಾಚಾರ ಮಾಡಿದ್ದಾರೆ ಎಂದು ದೂರು ನೀಡಿದರು. ಇದಾದ ನಂತರ ಮತ್ತೊಬ್ಬ ಮಹಿಳೆ, ತಾನು 15 ವರ್ಷದ ಅಪ್ರಾಪ್ತೆಯಾಗಿದ್ದಾಗ ನನ್ನ ಮೇಲೆ ಶ್ರೀಗಳು ಲೈಂಗಿಕ ದೌರ್ಜನ್ಯ ನಡೆಸಿದರು ಎಂದು ಆರೋಪಿಸಿ ಪ್ರಕರಣ ದಾಖಲಿಸಿದ್ದರು.

ತನ್ನ ಅನುಯಾಯಿಗಳಿಗೆ ತಾನು ರಾಮನ ಪರಮಾವತಾರ ಎಂದು ಬೆಪ್ಪರನ್ನಾಗಿಸುತ್ತಿದ್ದ. ಈತ ತಾನು ಮಾಡುವ ಎಲ್ಲಾ ಕಾರ್ಯಗಳು ರಾಮನ ಇಚ್ಛೆ, ತನಗೆ ಮಾಡುವ ಸೇವೆ ರಾಮನಿಗೆ ಸಲ್ಲುತ್ತದೆ ಎಂದು ಅನುಯಾಯಿಗಳನ್ನು ನಂಬಿಸಿದ್ದ ಎಂದು ದೂರುದಾರೆ ರಾಷ್ಟ್ರಪತಿಗಳಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದರು.

ಪ್ರಕರಣ ಪ್ರತಿ ಬಾರಿ ಕೋರ್ಟ್ ಮೆಟ್ಟಿಲೇರಿದಾಗಲೂ ಪರಿಹಾರ ಸಿಗದೆ ಮುಂದೂಡಲಾಗುತ್ತಿತ್ತು. 2014ರಲ್ಲಿ ಏಕಕಾಲದಲ್ಲಿ ಎರಡು ಪ್ರಕರಣಗಳ ವಿಚಾರಣೆ ನಡೆದವು. ಮೊದಲನೆಯದಾಗಿ, ಗೀತಾ ಅವರ ಅತ್ಯಾಚಾರ ಪ್ರಕರಣವನ್ನು ವಿಚಾರಣಾ ನ್ಯಾಯಾಲಯವು ವಿಚಾರಣೆ ನಡೆಸುತ್ತಿತ್ತು; ಎರಡನೆಯದಾಗಿ, ರಾಘವೇಶ್ವರ ಸ್ವಾಮಿ ಕರ್ನಾಟಕ ಹೈಕೋರ್ಟ್‌ನಲ್ಲಿ ತಮ್ಮ ವಿರುದ್ಧದ ಪ್ರಕರಣವನ್ನು ವಜಾಗೊಳಿಸುವಂತೆ ಕೋರಿ ಅರ್ಜಿಗಳನ್ನು ಸಲ್ಲಿಸುತ್ತಿದ್ದರು. 2014ರಿಂದ ಹೈಕೋರ್ಟ್‌ನ ಸುಮಾರು 10 ನ್ಯಾಯಾಧೀಶರು ರಾಘವೇಶ್ವರ ಭಾರತಿ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿದ್ದರು. 2025 ಮಾರ್ಚ್ 7ರಂದು ಕೋರ್ಟ್ ಸಿಐಡಿ ತನಿಖಾ ತಾಂತ್ರಿಕ ಲೋಪ ಹಾಗೂ ಸಾಕ್ಷ್ಯಾಧಾರಗಳ ಕೊರತೆಯ ಕಾರಣ ಕೊಟ್ಟು ಪ್ರಕರಣ ವಜಾಗೊಳಿಸಿತು.

ಈತ ಹವ್ಯಕ ಬ್ರಾಹ್ಮಣ ಪಂಗಡಕ್ಕೆ ಸೇರಿದ ಶಂಕರಾಚಾರ್ಯರ ಅನುಯಾಯಿ. ಸಹಜವಾಗಿಯೇ ಬಹಳ ಪ್ರಬಲ ಹಿನ್ನೆಲೆ ಹೊಂದಿರುವುದರಲ್ಲಿ ಸಂಶಯವಿಲ್ಲ. ಇವನಿಗೆ ಪ್ರಧಾನಿ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್ ಜೊತೆಗೂ ಸಂಪರ್ಕವಿತ್ತು. ಹೀಗೆ ದೇಶದೆಲ್ಲೆಡೆ ಇಂತಹ ಆಧ್ಯಾತ್ಮ ಗುರುಗಳ ವೇಷ ತೊಟ್ಟು ಭಕ್ತರೆಂದು ಬಂದ ಮಹಿಳೆಯರನ್ನು ಅತ್ಯಾಚಾರ ನಡೆಸಿದ ಹತ್ತಾರು ಪ್ರಕರಣಗಳನ್ನು ದಾಖಲಾಗಿದೆ.

ಸುಂಕ ಕಡಿತ ಬಿಲ್ಡಪ್ ಹೆಚ್ಚು, ರಿಯಾಲಿಟಿ ಬೇರೆ; 'ಕಾಲಾಂತರದ ಸಹಜ ಬೆಲೆ ಏರಿಕೆ' ಎಂಬ ವಾದಕ್ಕೂ ಇಲ್ಲಿದೆ ಉತ್ತರ

ಕಚ್ಚಾ ತೈಲದ ಬೆಲೆಯನ್ನು ಹೋಲಿಸಿದರೆ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. 2014ರ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಸುಮಾರು 100 ಡಾಲರ್‌ಗೂ ಹೆಚ್ಚು ಮಟ್ಟದಲ್ಲಿತ್ತು. ಆದರೆ ಆ ಸಮಯದಲ್ಲಿ ಪೆಟ್ರೋಲ್ ದರ ₹70-75 ಹಾಗೂ ಡೀಸೆಲ್ ದರ ₹55-60 ನಡುವೆ ಇತ್ತು. ಆದರೆ 2015ರಿಂದ ಹಲವು ವರ್ಷಗಳವರೆಗೆ ಕಚ್ಚಾ ತೈಲದ ಬೆಲೆ 40 ರಿಂದ 70 ಡಾಲರ್ ನಡುವೆ, ಅಂದರೆ 2014ಕ್ಕಿಂತ ಕಡಿಮೆ ಮಟ್ಟದಲ್ಲೇ ಇತ್ತು. ಆದರೂ ದೇಶದಲ್ಲಿ ಪೆಟ್ರೋಲ್-ಡೀಸೆಲ್ ದರ ಕಡಿಮೆಯಾಗಲಿಲ್ಲ. ಬದಲಿಗೆ ಹೆಚ್ಚೇ ಆಯಿತು.

ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 13 ರೂಪಾಯಿಯಿಂದ 3 ರೂಪಾಯಿಗೆ ಹಾಗೂ ಡೀಸೆಲ್ ಮೇಲಿನ ಸುಂಕವನ್ನು 10 ರೂಪಾಯಿಯಿಂದ ಶೂನ್ಯಕ್ಕೆ ಇಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆದರೆ, ಈ ಸುಂಕ ಕಡಿತದಿಂದ ಪೆಟ್ರೋಲ್-ಡೀಸೆಲ್ ದರದಲ್ಲಿ ನೇರ ಇಳಿಕೆ ಆಗುವುದಿಲ್ಲ. ಆದರೆ, ಯುದ್ಧದ ಪರಿಣಾಮದ ಬೆಲೆಯೇರಿಕೆಯ ಹೊರೆಯಿಂದ ಜನಸಾಮಾನ್ಯ ಬಚಾವ್ ಆಗ್ತಾನೆ. ಅಂದರೆ, ಇದು ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆ ಅಲ್ಲ, ಬೆಲೆ ಏರಿಕೆಯನ್ನು ತಡೆಯುವ ಕ್ರಮ ಮಾತ್ರ.

ಮೂಲಗಳ ಪ್ರಕಾರ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತಿರುವ ಕಾರಣ ತೈಲ ಕಂಪೆನಿಗಳು ಒತ್ತಡದಲ್ಲಿದ್ದವು. ಈ ಸಂದರ್ಭದಲ್ಲಿ ಸುಂಕ ಕಡಿತ ಮಾಡದೇ ಇದ್ದರೆ ಪೆಟ್ರೋಲ್-ಡೀಸೆಲ್ ದರ ಏರಿಕೆಯಾಗುವುದು ಅನಿವಾರ್ಯವಾಗುತ್ತಿತ್ತು. ಇಂಧನ ಬೆಲೆ ಏರಿದರೆ ಅದರ ಪರಿಣಾಮ ನೇರವಾಗಿ ಜನರ ಮೇಲೆ ಬೀಳುತ್ತದೆ. ಸಾರಿಗೆ ವೆಚ್ಚ ಹೆಚ್ಚಾಗಿ, ಆಹಾರ ಪದಾರ್ಥಗಳು ಸೇರಿದಂತೆ ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಇದರಿಂದ ಚುನಾವಣೆಯ ಮುನ್ನ ಜನರ ಅಸಮಾಧಾನ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ಇದೇ ಮೋದಿ ಸರ್ಕಾರವೇ ಹಿಂದೆ ಹೆಚ್ಚಿಸಿದ್ದ ಸುಂಕವನ್ನು ಈಗ ಸ್ವಲ್ಪ ಮಟ್ಟಿಗೆ ಇಳಿಸಿ ಬೆಲೆ ಏರಿಕೆಯನ್ನು ತಡೆಯಲು ಪ್ರಯತ್ನಿಸಿದೆ. ಅಂತೂ ಯುದ್ಧದ ಕಾರಣದ ಬೆಲೆಯೇರಿಕೆಯಿಂದ ಜನಸಾಮಾನ್ಯರು ಬಚಾವ್!

ಮಹಾರಾಷ್ಟ್ರದಲ್ಲಿ ತಾನು ಶಿವನ ಅವತಾರ ಎಂದು ಹೇಳಿಕೊಂಡ ನಕಲಿ ದೇವಮಾನವ ಬಾಬಾ ಹೃಷಿಕೇಶ್ ವೈದ್ಯ ಎಂಬಾತನನ್ನು ಅತ್ಯಾಚಾರ ಪ್ರಕರಣದಲ್ಲಿ ಬಂಧಿಸಲಾಗಿದೆ. ಕಳೆದ ವಾರ ಮಾಜಿ ಮರ್ಚಂಟ್ ನೇವಿ ಅಧಿಕಾರಿ ಅಶೋಕ್ ಖರಾತ್‌ನನ್ನು ಬಂಧಿಸಲಾಗಿದೆ....

ಕರ್ನಾಟಕ ಏಕೀಕರಣವಾದಾಗ ಟಿಪ್ಪು ಗುರುತಿಸಿದ ಭೂ ಭಾಗಗಳ ಆಧಾರದಲ್ಲೇ ಬಹುತೇಕ 'ಕರ್ನಾಟಕ ರಾಜ್ಯ' ಉದಯವಾಯಿತು. ಹಾಗಾಗಿ ಈಗಿನ ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸೇರ್ಪಡೆಯೂ ಸೇರಿದಂತೆ ಕರ್ನಾಟಕ ಏಕೀಕರಣದ ಮೂಲ ಪುರುಷ ಟಿಪ್ಪು...

ಆದರೆ, ಇದನ್ನೇ ಏನೇನೋ ಬಿಲ್ಡಪ್ ಕೊಡಲು ಬಳಸುವಾಗ ವಾಸ್ತವವೂ ಜನರಿಗೆ ಗೊತ್ತಿದ್ದರೆ ಚೆನ್ನ. ಮೋದಿ ಸರಕಾರಗಳು ಹೆಚ್ಚಿಸಿದ್ದ ಸುಂಕಗಳನ್ನು ಈಗ ಸ್ವಲ್ಪ ಇಳಿಸಿದ್ದಷ್ಟೇ. 2014ರಲ್ಲಿ ಪೆಟ್ರೋಲ್ ಮೇಲಿನ ಕೇಂದ್ರ ಅಬಕಾರಿ ಸುಂಕ ₹9.48 ಹಾಗೂ ಡೀಸೆಲ್ ಮೇಲಿನ ಸುಂಕ ₹3.56 ಮಾತ್ರವಿತ್ತು. ಅದನ್ನೇ ನರೇಂದ್ರ ಮೋದಿ ತೀವ್ರವಾಗಿ ಟೀಕೆ ಮಾಡುತ್ತಿದ್ದರು. ತನಗೆ ಇದನ್ನು ಕಡಿಮೆ ಮಾಡುವ ಸ್ಪೆಷಲ್ ತಾಕತ್ತು ಇದೆ ಎಂದು ಹೇಳಿ ಭಾಷಣ ಮಾಡುತ್ತಿದ್ದರು. ಆದರೆ, ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಲವು ಹಂತಗಳಲ್ಲಿ ಸುಂಕ ಹೆಚ್ಚಿಸಲಾಯಿತು. 2020ರ ವೇಳೆಗೆ ಪೆಟ್ರೋಲ್ ಮೇಲಿನ ಸುಂಕ ₹32.98 ಹಾಗೂ ಡೀಸೆಲ್ ಮೇಲಿನ ಸುಂಕ ₹31.83ರವರೆಗೆ ಏರಿಸಲಾಯಿತು. ಈಗ ಸುಂಕ ಕಡಿತ ಮಾಡಿದ ಬಳಿಕವೂ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಕೇಂದ್ರ ತೆರಿಗೆಗಳು ಗಮನಾರ್ಹ ಮಟ್ಟದಲ್ಲೇ ಉಳಿದಿವೆ. 2014 ಗಿಂತ ಈಗಲೂ ತೆರಿಗೆ ಹೆಚ್ಚು ಇದೆ ಎಂಬುದು ಸ್ಪಷ್ಟ.

ಕಚ್ಚಾ ತೈಲದ ಬೆಲೆಯನ್ನು ಹೋಲಿಸಿದರೆ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. 2014ರ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರೆಲ್‌ಗೆ ಸುಮಾರು 100 ಡಾಲರ್‌ಗೂ ಹೆಚ್ಚು ಮಟ್ಟದಲ್ಲಿತ್ತು. ಆದರೆ ಆ ಸಮಯದಲ್ಲಿ ಪೆಟ್ರೋಲ್ ದರ ₹70-75 ಹಾಗೂ ಡೀಸೆಲ್ ದರ ₹55-60 ನಡುವೆ ಇತ್ತು. ಆದರೆ 2015ರಿಂದ ಹಲವು ವರ್ಷಗಳವರೆಗೆ ಕಚ್ಚಾ ತೈಲದ ಬೆಲೆ 40 ರಿಂದ 70 ಡಾಲರ್ ನಡುವೆ, ಅಂದರೆ 2014ಕ್ಕಿಂತ ಕಡಿಮೆ ಮಟ್ಟದಲ್ಲೇ ಇತ್ತು. ಆದರೂ ದೇಶದಲ್ಲಿ ಪೆಟ್ರೋಲ್-ಡೀಸೆಲ್ ದರ ಕಡಿಮೆಯಾಗಲಿಲ್ಲ. ಬದಲಿಗೆ ಹೆಚ್ಚೇ ಆಯಿತು. ಅನೇಕ ನಗರಗಳಲ್ಲಿ ಪೆಟ್ರೋಲ್ ₹90 ದಾಟಿ ₹100 ತಲುಪಿತು. ಡೀಸೆಲ್ ಕೂಡ ₹80-90 ಮಟ್ಟ ತಲುಪಿತು.

ಈ ಬೆಲೆಯೇರಿಕೆಯ ಹಣವನ್ನು ಸಾಲ ಸಂದಾಯಕ್ಕೆ ಬಳಸಲಾಗಿದೆ ಎಂಬುದು ಒಂದು ರೀತಿಯ ಸಮರ್ಥನೆ. ಕಾಲಾಂತರದಲ್ಲಿ ಬೆಲೆಯೇರಿಕೆ ಸಹಜ ಎಂಬುದು ಇನ್ನೊಂದು ವಾದ. ಮೊದಲನೆಯದು ಅಪ್ಪಟ ಸುಳ್ಳು. ಎರಡನೆಯದು ಮುಗ್ಧತೆ ಮತ್ತು ಕುತರ್ಕ. ಕಾಲಾಂತರದಲ್ಲಿ ಬೆಲೆ ಏರಿಕೆಯಾಗುವುದು ಸಹಜವೆಂದರೆ, ಅದೇ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಕೂಡ ಏರಿಕೆಯಾಗಬೇಕಿತ್ತು. ಆದರೆ ವಾಸ್ತವದಲ್ಲಿ ಹಾಗಾಲಿಲ್ಲ. ಹಲವು ವರ್ಷಗಳ ಕಾಲ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದ್ದರೂ ದೇಶದಲ್ಲಿ ಪೆಟ್ರೋಲ್-ಡೀಸೆಲ್ ದರಗಳು ಹೆಚ್ಚುತ್ತಲೇ ಹೋದವು.

ಈಗ ಇರಾನ್ ಯುದ್ಧದ ಬಳಿಕ ಕಚ್ಚಾ ತೈಲದ ಬೆಲೆ 100 ಡಾಲರ್‌ಕ್ಕಿಂತ ಮೇಲಿನ ಮಟ್ಟದಲ್ಲಿ ತೀವ್ರ ಏರಿಳಿತ ಕಾಣುತ್ತಿದೆ. ಇದು ಒಂದು ಪ್ರಮುಖ ವಾಸ್ತವವನ್ನು ಸ್ಪಷ್ಟಪಡಿಸುತ್ತದೆ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚು ಇದ್ದರೂ ತೆರಿಗೆ ಕಡಿಮೆ ಇತ್ತು. ಅದರಿಂದ ಜನರಿಗೆ ಇಂಧನ ಕಡಿಮೆ ದರದಲ್ಲಿ ಸಿಗುತ್ತಿತ್ತು. ಆದರೆ ಮೋದಿ ಸರ್ಕಾರದ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಕಡಿಮೆಯಾಗಿದ್ದರೂ ತೆರಿಗೆ ಹೆಚ್ಚಿಸಿ ಅದರ ಪರಿಣಾಮವಾಗಿ ಜನರಿಗೆ ಇಂಧನ ದುಬಾರಿಯಾಯಿತು.

ಹೀಗಾಗಿ ಈಗ ಮಾಡಿರುವ ಸುಂಕ ಕಡಿತಕ್ಕೆ ದೊಡ್ಡ ಬಿಲ್ಡಪ್ ಅನಗತ್ಯ. ಹಿಂದೆ ಹೆಚ್ಚಿಸಿದ್ದ ಭಾರದ ಒಂದು ಭಾಗವನ್ನು ಮಾತ್ರ ಈಗ ಕಡಿತ ಮಾಡಲಾಗಿದೆ. ಕಚ್ಚಾ ತೈಲದ ಬೆಲೆ ಹೆಚ್ಚು ಇದ್ದಾಗಲೂ ಜನರ ಹೊರೆ ಕಡಿಮೆ ಮಾಡುವ ನೀತಿಯನ್ನು ಮನಮೋಹನ್ ಸಿಂಗ್ ಸರ್ಕಾರ ಅನುಸರಿಸಿತು. ಆದರೆ ಕಚ್ಚಾ ತೈಲದ ಬೆಲೆ ಕಡಿಮೆಯಾಗಿದ್ದರೂ ತೆರಿಗೆ ಹೆಚ್ಚಿಸಿ ಜನರ ಮೇಲಿನ ಹೊರೆ ಹೆಚ್ಚಿಸಿದದ್ದು ಮೋದಿ ಸರ್ಕಾರ. ಈಗ ಮತ್ತೆ ಅದೇ ತೆರಿಗೆಯ ಒಂದು ಭಾಗವನ್ನು ಕಡಿತ ಮಾಡಲಾಗಿದೆ. ಹೀಗಾಗಿ, ಇದು ಮೊದಲು ಹೆಚ್ಚಿಸಿದ್ದ ಭಾರದ ಸ್ವಲ್ಪ ಭಾಗವನ್ನು ಹಿಂದಕ್ಕೆ ತೆಗೆದುಕೊಂಡ ಕ್ರಮ ಮಾತ್ರ.

ಗಂಗಾವತಿಯಲ್ಲಿ 35 ಟನ್ ಪಿಡಿಎಸ್ ಅಕ್ಕಿ ಅಕ್ರಮ ಸಾಗಣೆ: ಮಾನ್ವಿ ಪ್ರಭಾವಿಗಳ ಮೇಲೆ ಎಫ್‌ಐಆರ್

ಗಂಗಾವತಿ: ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪದ ಮೇಲೆ ಇಲ್ಲಿನ ಆಹಾರ ಇಲಾಖೆಯ ನಿರೀಕ್ಷಕ ಶೇಖರಪ್ಪ ನೀಡಿದ ದೂರಿನ ಮೇರೆಗೆ ಮಾನ್ವಿಯ ಪ್ರಭಾವಿ ನಾಯಕರ ಮೇಲೆ ನಗರಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾನ್ವಿಯ ವೀರಭದ್ರೇಶ್ವರ ಇಂಡಸ್ಟ್ರೀಜ್ ರೈಸ್ಮಿಲ್ ಮಾಲೀಕರಾದ ಬಸವನಗೌಡ ಹಾಲ್ದಾಳ್, ವೀರಭದ್ರೇಶ್ವರ ಹಾಲ್ದಾಳ್, ಮತ್ತೊಬ್ಬ ಪ್ರಭಾವಿ ರಾಯಚೂರಿನ ವೆಂಕಟರೆಡ್ಡಿ, ಕೊಪ್ಪಳ ತಾಲ್ಲೂಕಿನ ಕೂಕನಪಳ್ಳಿಯ ಮಾಯಾಮಾಯ ಟ್ರೇಡರ್ಸ್ ಮಾಲೀಕ ಯಮನೂರಪ್ಪ ಎಂಬುವರ ಮೇಲೆ ದೂರು ದಾಖಲಾಗಿದೆ.

ರಾಜ್ಯ ಸರ್ಕಾರ ನಾಗರಿಕರ ಸರಬರಾಜು ಇಲಾಖೆಯ ಮೂಲಕ ಬಡವರಿಗೆಂದು ಪಡಿತರ ಆಹಾರ ಧಾನ್ಯ ಪೂರೈಕೆಯಡಿ ನೀಡಿದ್ದ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದು, ಈ ಮೂಲಕ ಅಗತ್ಯ ವಸ್ತುಗಳ ಕಾಯ್ದೆ 1955ರ ಕಲಂ 3 ಮತ್ತ 7 ಉಲ್ಲಂಘಿಸಿದ್ದು, ಇವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಶೇಖರಪ್ಪ ದೂರಿನಲ್ಲಿ ತಿಳಿಸಿದ್ದಾರೆ.

ಮಾರುಕಟ್ಟೆ ಮೌಲ್ಯದ ಸಮಾರು ಹತ್ತು ಲಕ್ಷ ರೂಪಾಯಿ ಮೊತ್ತದ 35.8 ಟನ್ ಪ್ರಮಾಣದ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಕೊಪ್ಪಳದ ಕೂಕನಪಳ್ಳಿಯಿಂದ ಮಾನ್ವಿಯ ವೀರಭದ್ರೇಶ್ವರ ರೈಸ್ ಮಿಲ್‌ಗೆ ಸಾಗಿಸುತ್ತಿದ್ದ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಪ್ರಮುಖರು ಇದನ್ನು ಪತ್ತೆ ಹಚ್ಚಿ ರೆಡ್‌ಹ್ಯಾಂಡಾಗಿ ಹಿಡಿದು ಆಹಾರ ಇಲಾಖೆಯ ವಶಕ್ಕೆ ಒಪ್ಪಿಸಿದರು.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR